
13 ಸೆಪ್ಟೆಂಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 185 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ನೂತನ ಉಪರಾಷ್ಟ್ರಪತಿಯಾಗಿ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದ ಸಿ.ಪಿ.ರಾಧಾಕೃಷ್ಣನ್ ಅವರು, ರಾಜ್ಯಸಭೆಯ ಸಭಾಪತಿಯಾಗಿ ಪದಗ್ರಹಣ ಮಾಡಿದರು.



ತಂಬಾಕು ವಿಶ್ವವ್ಯಾಪಿಯಾಗಲು ಗ್ರಹಣಗಳೇ » 2



ಶಿಕ್ಷಕರ ವರ್ಗಾವಣೆ : ವಿದ್ಯಾರ್ಥಿ-ಪೋಷಕರಿಂದ ಪ್ರತಿಭಟನೆ » 3



ಜಾತಿ ಗಣತಿಗೆ 420 ಕೋಟಿ ರೂ. ನಿಗದಿ » 4

# ಮೆರವಣಿಗೆಯ ಘೋರ ದುರಂತದಲ್ಲಿ 9 ಜನರ ಸಾವು

## ಮೊಸಳೆಹೊಸಹಳ್ಳಿ ಗಣೇಶ ವಿಸರ್ಜನೆ ವೇಳೆ ಘಟನೆ | ಕ್ಯಾಂಟರ್ ಚಾಲಕನ ಎಡವಟ್ಟಿಗೆ ಪ್ರಾಣಬಿಟ್ಟ ವಿದ್ಯಾರ್ಥಿಗಳು

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಮೊಸಳೆಹೊಸಹಳ್ಳಿಯಲ್ಲಿ ಶುಕ್ರವಾರ ಸಂಜೆ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಮೇಲೆ ಕ್ಯಾಂಟರ್ ಹರಿದ ಪರಿಣಾಮ ಒಂಭತ್ತು ಜನರು ದಾರುಣ ಸಾವಿಗೀಡಾದ ಘಟನೆ ನಡೆದಿದೆ.

ಸಂಜೆ ಸುಮಾರು 8 ಗಂಟೆ ಸಮಯದಲ್ಲಿ ಘಟನೆ ನಡೆದಿದ್ದು ರಾಜ್ಯವನ್ನೇ ಬೆಚ್ಚಿ ಬೀಳಿಸಿದೆ. ಅದ್ದೂರಿ ಗಣೇಶೋತ್ಸವದಲ್ಲಿ ಕುಣಿದು ಕುಪ್ಪಳಿಸುತ್ತಿದ್ದ ಯುವಕರು ಬಾರದ ಲೋಕಕ್ಕೆ ತೆರಳಿದ್ದಾರೆ. ಎಲ್ಲರೂ 18 ರಿಂದ 25 ವರ್ಷದೊಳಗಿನವರೇ ಆಗಿದ್ದು ಕಾಲೇಜು ವ್ಯಾಸಂಗ ಮಾಡು ತ್ತಿದ್ದರು. ಮೊಸಳೆ ಹೊಸಹಳ್ಳಿ ಮಾತ್ರವಲ್ಲದೆ ಸುತ್ತಲಿನ ಗ್ರಾಮದ ಯುವಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮೃತರನ್ನು ಡನಾಯಕನಹಳ್ಳಿ ಗ್ರಾಮದ ಈಶ್ವರ್ (18), ಮುತ್ತಿಗೆ ಹಿರೇಹಳ್ಳಿಯ ಗೋಕುಲ್ (18), ಚಿಕ್ಕಮಗಳೂರು ಜಿಲ್ಲೆ ಮಾಣೇನ ಹಳ್ಳಿಯ ಸುರೇಶ್ (19), ಪವನ್, ಕುಮಾರ್ (25), ರಾಜೇಶ್ (17), ಮಿಥುನ್ (23), ಬಿಹಾರ ಮೂಲದ ಇಂಜಿನೀಯರಿಂಗ್ ವಿದ್ಯಾರ್ಥಿ, ಶಾಂತಿಗ್ರಾಮ ಹೋಬಳಿ ಬಂಟರಹಳ್ಳಿಯ ಪ್ರಭಾಕರ್ (51) ಮೃತರು. ಮೃತ ಮಿಥುನ್ ಆಗಷ್ಟೇ ಹುಟ್ಟು ಹಬ್ಬದ ಕೇಕ್ ಕತ್ತರಿಸಿ ಸ್ನೇಹಿತರೊಂದಿಗೆ ಮೆರವಣಿಗೆಲ್ಲಿ ಪಾಲ್ಗೊಂಡಿದ್ದ. ಘಟನೆಯಲ್ಲಿ 25 ಜನರು ಗಾಯಗೊಂಡಿದ್ದು ಪ್ರಭಾಕರ್, ದರ್ಶನ್, ಗೋಕುಲ್, ದಿಕ್ಷೀತ್, ಅರ್ಶಿತ್, ವಿನಯ್, ಆದರ್ಶ, ಯಶ್ವಂತ್, ಸುದೀಪ್, ಅಶೋಕ್, ವಿಷ್ಣು, ಚಂದನ್, ವಿಶಾಲ್ ಎಂದು ಗುರುತಿಸಲಾಗಿದೆ.



### ಪ್ರಮುಖಾಂಶಗಳು

- ಘಟನೆಯಲ್ಲಿ 9 ಜನರ ಸಾವು
- 25 ಯುವಕರಿಗೆ ಗಾಯ
- 18 ಜನರು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲು
- 7 ಯುವಕರಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ

### ಕ್ಷಣಾರ್ಧದಲ್ಲಿ ಸ್ಮಶಾನ ಮೌನ

500ಕ್ಕೂ ಅಧಿಕ ಜನರು ಸಂಭ್ರಮ ದಿಂದ ಸಾಗುತ್ತಿದ್ದಾಗ ಜವರಾಯ ಅಟ್ಟಹಾಸ ಮೆರೆದಿದ್ದು ಕ್ಷಣಾರ್ಧ ದಲ್ಲಿ ಸ್ಮಶಾನ ಮೌನ ಆವರಿಸಿತು. ತಕ್ಷಣ ಗಣೇಶ ಡಿಜೆಯನ್ನು ಅಲ್ಲಿಯೇ ನಿಲ್ಲಿಸಿ ಮೃತ ಶವ ಹಾಗು ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲಾಯಿತು.

### ಮೆರವಣಿಗೆ ವೇಳೆ ಆಗಿದ್ದೇನು

ಪ್ರತಿ ವರ್ಷದಂತೆ ಈ ಬಾರಿಯೂ ಗ್ರಾಮಸ್ಥರು ಒಟ್ಟಾಗಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಿದ್ದರು. ವಿಸರ್ಜನಾ ಮೆರವಣಿಗೆಯನ್ನು ಅದ್ದೂರಿಯಾಗಿಸಲು ಡಿಜೆಗೆ ನಿಷೇಧವಿದ್ದರೂ ರಾಜಕಾರಣಿಗಳ ಮೂಲಕ ಒತ್ತಡ ಹೇರಿ ಅವಕಾಶ ಪಡೆದಿದ್ದರು. ಆದರೆ ಅದುವೇ ಅಮಾಯಕ ಜೀವಗಳನ್ನು ಬಲಿ ಪಡೆದಿದೆ.

ಕ್ಯಾಂಟರ್ ಚಾಲಕ ಕಟ್ಟೆಬೆಳಗುಲಿ ಗ್ರಾಮದ ಭುವನೇಶ್ ಹಾಸನದಿಂದ ಮೈಸೂರಿಗೆ ತೆರಳು ತ್ತಿದ್ದ. ಎದುರಿಗೆ ಮೆರವಣಿಗೆ ಬರುತ್ತಿದ್ದರು ಜೋರಾಗಿ ಬಂದಿದ್ದಾನೆ. ಭುವನೇಶ್ ಪರಿಪೂರ್ಣ ಚಾಲಕನಲ್ಲ. ಹೆಲ್ಪರ್ ಆಗಿದ್ದ ಆತ ವಾಹನ ಓಡಿಸುತ್ತಿದ್ದ. ರಸ್ತೆಗೆ ಬೈಕ್ ಅಡ್ಡ ಬಂದಿತೆಂದು ಡಿಕ್ಕಿಯಾಗುವುದನ್ನು ತಪ್ಪಿಸಲು ಬಲಕ್ಕೆ ತಿರುಗಿಸಿದ್ದರಿಂದ ಡಿವೈಡರ್‌ಗೆ ಡಿಕ್ಕಿಯಾಗಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಯುವಕರ ಮೇಲೆ ಹರಿದಿದೆ. ಅದೃಷ್ಟವಶಾತ್ ಅಲ್ಲಿ ಗೂಡ್ಸ್ ವಾಹನ ನಿಂತಿದ್ದ ರಿಂದ ಅದಕ್ಕೆ ಡಿಕ್ಕಿಯಾಗಿ ಹೆಚ್ಚಿನ ಅನಾಹುತ ತಪ್ಪಿದೆ. ಇಲ್ಲದಿದ್ದರೆ ಸಾವು ನೋವಿನ ಸಂಖ್ಯೆ ಹೆಚ್ಚುತ್ತಿತ್ತು. ಕ್ಯಾಂಟರ್ ಒಮ್ಮೆಲೇ ಹರಿದ ಪರಿಣಾಮ ಹೌಹಾರಿದ ಜನರು ಸ್ಥಳಕ್ಕೆ ಧಾವಿಸಿದ್ದು ಅಷ್ಟರಲ್ಲಿ ಎಲ್ಲವೂ ಮುಗಿದು ಹೋಗಿತ್ತು.



### ಹಿಮ್ಸ್‌ನಲ್ಲಿ ಕುಟುಂಬಸ್ಥರ ಆಕ್ರಂದನ

ದುರ್ಘಟನೆಯಲ್ಲಿ ಮೃತಪಟ್ಟ ಕುಟುಂಬಸ್ಥರ ಆಕ್ರಂದ ಮುಗಿಲು ಮುಟ್ಟಿತ್ತು. ಹಾಸನದಲ್ಲಿ ಪಿಯುಸಿ ವ್ಯಾಸಂಗ ಮಾಡುತ್ತಿದ್ದ ಗೋಕುಲ್‌ನ ಸಹೋದರ ಬಿಕ್ಕಳಿಸಿ ರೋದಿಸುತ್ತಿದ್ದುದು ಕಣ್ಣಾಲಿಗಳು ತೇವವಾಗುವಂತೆ ಮಾಡಿತು. ನಾನು ಸಹ ಅಣ್ಣನೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದೆ. ಅವನು ತನ್ನ ಸ್ನೇಹಿತರೊಂದಿಗೆ ಸುಮಾರು 50 ಮೀಟರ್ ದೂರದಲ್ಲಿದ್ದ, ನಾನು ನನ್ನ ಗೆಳೆಯರೊಂದಿಗೆ ಹಿಂದಿನಿಂದ ಬರುತ್ತಿದ್ದೆ. ಬಹುಶ: ನಾನು ಆತನ ಜೊತೆಗೆ ಹೋಗ ಬೇಕಿತ್ತು. ಅಣ್ಣ ಇಲ್ಲದೆ ಹೇಗೆ ಇರಲಿ ಎಂದು ಬಿಕ್ಕಿ ಬಿಕ್ಕಿ ಅತ್ತನು. ಮತ್ತೊಂದೆಡೆ ಮಗನನ್ನು ಕಳೆದುಕೊಂಡ ದು:ಖದಲ್ಲಿ ಪ್ರಜ್ಞೆ ತಪ್ಪಿದ ತಾಯಿಯ ಬಳಿ ಬಂದ ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ದು:ಖ ತಡೆಯಲಾಗದೆ ಕಣ್ಣೀರು ಸುರಿಸಿದರು.

### ಇಂದು ಸಚಿವ ಕೃಷ್ಣಬೈರೇಗೌಡರ ಭೇಟಿ

ಮೊಸಳೆಹೊಸಹಳ್ಳಿಯಲ್ಲಿ ಸಂಭವಿಸಿದ ದುರಂತಕ್ಕೆ ಸಂತಾಪ ಸೂಚಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು, ಮೃತರ ಕುಟುಂಬಕ್ಕೆ ದು:ಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿದ್ದಾರೆ. ಶನಿವಾರ ಘಟನಾ ಸ್ಥಳಕ್ಕೆ ಭೇಟಿ ನೀಡುತ್ತೇನೆಂದು ತಿಳಿಸಿದ್ದಾರೆ.

### ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ

**ಬೆಂಗಳೂರು:** ಹಾಸನ ಜಿಲ್ಲೆಯ ಮೊಸಳೆಹೊಸಹಳ್ಳಿ ಯಲ್ಲಿ ಶುಕ್ರವಾರ ಸಂಭವಿಸಿದ ಗಣೇಶ ಮೂರ್ತಿ ಮೆರವಣಿಗೆ ವೇಳೆ ಸಂಭವಿಸಿದ ದುರಂತದಲ್ಲಿ ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದಾರೆ.

ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಗಾಯಾಳುಗಳು ಆದಷ್ಟು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಕುಟುಂಬಗಳಿಗೆ ಸರ್ಕಾರದ ವತಿಯಿಂದ ತಲಾ ರೂ.5 ಲಕ್ಷ ಪರಿಹಾರ ನೀಡಲಾಗುವುದು. ಘಟನೆಯಲ್ಲಿ ಗಾಯಗೊಂಡವರ ಚಿಕಿತ್ಸೆಯ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಇದು ಅತ್ಯಂತ ನೋವಿನ ಘಳಿಗೆ. ಅಪಘಾತ ಸಂತ್ರಸ್ತ ಕುಟುಂಬಗಳ ಜೊತೆ ನಾವೆಲ್ಲರೂ ನಿಲ್ಲೋಣ ಎಂದಿದ್ದಾರೆ.

**ಗಣ್ಯರ ಸಂತಾಪ**

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಪ್ರಲ್ಹಾದ್ ಜೋಷಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕರಾದ ಸಿ.ಎನ್ .ಬಾಲಕೃಷ್ಣ, ಹೆಚ್.ಪಿ.ಸ್ವರೂಪ್ ಸೇರಿ ಅನೇಕರು ಘಟನೆಗೆ ಸಂತಾಪ ಸೂಚಿಸಿದ್ದಾರೆ.














### ಡಿಜೆಗೆ ಅನುಮತಿ ಕೊಟ್ಟಿದ್ದು ಏಕೆ?

ಗಣೇಶೋತ್ಸವ ಮೆರವಣಿಗೆಗೆ ಈ ಬಾರಿ ಡಿಜೆ ನಿಷೇಧಿಸಿ ರಾಜ್ಯ ಸರ್ಕಾರ ಆದೇಶಿಸಿದ್ದರೂ ಮೊಸಳೆಹೊಸಹಳ್ಳಿಯಲ್ಲಿ ಅವಕಾಶ ಕಲ್ಪಿಸಿದ್ದು ಏಕೆ, ಒತ್ತಡ ಹಾಕಿದವರು ಯಾರೆಂಬ ಪ್ರಶ್ನೆಯನ್ನು ಸಾರ್ವಜನಿಕರು ಮುಂದಿಟ್ಟಿದ್ದಾರೆ. ಸರಾಗವಾಗಿ ಮೆರವಣಿಗೆ ನಡೆಯುತ್ತದೆಂದು ಭಾವಿಸಿ ಕಡಿಮೆ ಸಂಖ್ಯೆಯ ಪೊಲೀಸ್ ಭದ್ರತೆ ವಹಿಸಿದ್ದೇ ಅವಘಡಕ್ಕೆ ಕಾರಣವಾಯಿತಾ. ಮುಖ್ಯ ರಸ್ತೆಯಾಗಿರುವುದರಿಂದ ಒಂದು ಬದಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿತ್ತು. ಆದರೆ ದ್ವಿಮುಖ ಸಂಚಾರ ವಾಗಿದ್ದರಿಂದ ಬೈಕ್ ಸವಾರನೊಬ್ಬ ಎದುರಿಗೆ ಹೋಗಿದ್ದು ಅವಘಡಕ್ಕೆ ಕಾರಣವಾಗಿದೆ ಎನ್ನಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಡಿಜೆ ಅಬ್ಬರ ಕಡಿಮೆಯಿತ್ತು. ಹಾಸನದಲ್ಲಿ ಇತ್ತೀಚೆಗೆ ನೆರವೇರಿದ ಪಾಂಚಜನ್ಯ ಮೆರವಣಿಗೆಯಲ್ಲಿ ಡಿಜೆ ಬಳಸಲಾಗಿತ್ತು. ನಂತರ ನಡೆದ ಈದ್ ಮಿಲಾದ್ ಮೆರವಣಿಗೆಯಲ್ಲೂ ಜೋರು ಶಬ್ದದ ಡಿಜೆ ಬಳಸಲಾಗಿತ್ತು. ಹೀಗಾಗಿ ಮೊಸಳೆ ಹೊಸಹಳ್ಳಿಯಲ್ಲೂ ಅವಕಾಶ ನೀಡಲಾಗಿತ್ತು. ಆದರೆ ಮುನ್ನೆಚ್ಚರಿಕೆ ವಹಿಸಿದ್ದರೆ ಘೋರ ದುರಂತ ತಪ್ಪಿಸಬಹುದಿತ್ತು.

### ಚಾಲಕನಿಗೂ ಗಂಭೀರ ಗಾಯ

ಅಪಘಾತದ ರಭಸಕ್ಕೆ ಮೊದಲು ಗೂಡ್ಸ ವಾಹನಕ್ಕೆ ಡಿಕ್ಕಿಯಾದ ಕ್ಯಾಂಟರ್ ನಂತರ ಗೋಡೆಗೆ ಅಪ್ಪಳಿಸಿದೆ. ಅದರಿಂದ ಚಾಲಕ ಭುವನೇಶ್‌ಗೂ ಗಾಯಗಳಾಗಿದ್ದು ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ವಾಹನದಲ್ಲೇ ಮಲಗಿದ್ದ ಮತ್ತೊಬ್ಬ ಚಾಲಕನನ್ನು ಸ್ಥಳೀಯರು ನಿದ್ರೆಯಿಂದ ಎಬ್ಬಿಸಿದ್ದಾರೆ.

**ಇದು ದುರ್ದೈವದ ಸಂಗತಿಯಾಗಿದ್ದು, ಮೃತರ ಆತ್ಮಕ್ಕೆ ಭಗವಂತ ಸದ್ಗತಿ ಕರುಣಿಸಲಿ ಹಾಗು ದುಃಖತಪ್ತ ಕುಟುಂಬಗಳಿಗೆ ನೋವು ಭರಿಸುವ ಶಕ್ತಿ ಕೊಡಲಿ. ಗಾಯಾಳುಗಳು ಬೇಗ ಚೇತರಿಸಿ ಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ.**
**ಹೆಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವರು.

**ಈ ರೀತಿಯ ದುರಂತ ನಡೆಯಬಾರದಿತ್ತು. ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದು, ಅವಘಡಕ್ಕೆ ಕಾರಣ ಏನೇದು ತಿಳಿಯಲು ತನಿಖೆ ನಡೆಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಲಾಗಿದೆ. ಗಾಯಾಳುಗಳನ್ನು ಹಿಮ್ಸ್ ಹಾಗು ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.**
**- ಶ್ರೇಯಸ್ ಪಟೇಲ್, ಸಂಸದ**

**ಮೆರವಣಿಗೆ ಬರುವ ಮಾರ್ಗದಲ್ಲಿ ಬ್ಯಾರಿಕೇಡ್ ಹಾಕಿದ್ದರೆ ಅನಾಹುತ ತಪ್ಪಿಸಬಹುದಿತ್ತು. ಕ್ಯಾಂಟರ್ ಚಾಲಕ ಅಷ್ಟೊಂದು ವೇಗವಾಗಿ ಬಂದಿದ್ದಾನೆಂದರೆ ಏನರ್ಥ. ನಾಲ್ಕು ಪಥದ ರಸ್ತೆ ಯಲ್ಲೂ ಅವಘಡ ಸಂಭವಿಸಿದೆ. ಪ್ರಕರಣದ ಸಂಪೂರ್ಣ ತನಿಖೆ ನಡೆಸಬೇಕು.**



**-ಹೆಚ್.ಡಿ. ರೇವಣ್ಣ, ಮಾಜಿ ಸಚಿವ**

### 25 ಲಕ್ಷ ರೂ. ಪರಿಹಾರ ಘೋಷಿಸಿ : ರೇವಣ್ಣ

**ಹಾಸನ :** ಘೋರ ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ರಾಜ್ಯ ಸರ್ಕಾರ 25 ಲಕ್ಷ ರೂ. ಪರಿಹಾರ ಘೋಷಿಸಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಹೊರ ಜಿಲ್ಲೆಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಮೆರವಣಿಗೆಯಲ್ಲಿ ಪಾಲ್ಗೊಂಡ ತಪ್ಪಿಗೆ ಪ್ರಾಣ ಕಳೆದುಕೊಳ್ಳುವಂತಾಗಿದೆ. ಕುಟುಂಬಸ್ಥರಿಗೆ ಸಾಂತ್ವನ ಹೇಳಲು ದು:ಖವಾಗುತ್ತಿದೆ. ಈ ಘಟನೆಗೆ ಕಾರಣ ಏನೆಂಬುದನ್ನು ಪತ್ತೆ ಮಾಡಬೇಕು. ಮೃತರ ಕುಟುಂಬಕ್ಕೆ ತಲಾ 25 ಲಕ್ಷ ರೂ. ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿದರು.

**ಘಟನಾ ಸ್ಥಳಕ್ಕೆ ಜನಪ್ರತಿನಿಧಿಗಳ ದೌಡು**

ಮೊಸಳೆಹೊಸಹಳ್ಳಿಯಲ್ಲಿ ದುರ್ಘಟನೆ ಸಂಭವಿಸಿದ ವಿಚಾರ ತಿಳಿದು ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಭೇಟಿ ನೀಡಿದರು. ಆ್ಯಂಬುಲೆನ್ಸ್‌ನಲ್ಲಿ ಗಾಯಾಳುಗಳನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡಿದರು. ರೋಗಿಗಳೊಂದಿಗೆ ಡಾ.ಸೂರಜ್ ರೇವಣ್ಣ ಅವರು ಹಿಮ್ಸ್‌ಗೆ ದೌಡಾಯಿಸಿ ರಾತ್ರಿಪೂರ್ತಿ ನಿಗಾ ವಹಿಸಿದರು. ಮಧ್ಯರಾತ್ರಿ 1 ಗಂಟೆಗೆ ಜೆಡಿಎಸ್ ಯುವಕ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಭೇಟಿ ನೀಡಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಎಎಸ್ಪಿ ತಮ್ಮಯ್ಯ, ಡಿಹೆಚ್‌ಒ ಡಾ.ಅನಿಲ್, ಗೊರೂರು ಪಿಎಸ್‌ಐ ಧನರಾಜ್ ಮತ್ತಿತರು ಸ್ಥಳದಲ್ಲಿ ಮೊಕ್ಕಾಂ ಹೂಡಿ ನಿಗಾ ವಹಿಸಿದರು.

## ಸಹೋದ್ಯೋಗಿ ಮೇಲೆ ಹಲ್ಲೆ: ಎಂ.ಶಿವರ ಪಿಡಿಒ ಅಮಾನತು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗಾಜಿನ ಮದ್ಯದ ಬಾಟಲಿಯಿಂದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮೇಲೆ ಹಲ್ಲೆ ನಡೆಸಿದ್ದ ಎಂ.ಶಿವರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಮಸ್ವಾಮಿ ಅವರನ್ನು ಅಮಾನತು ಮಾಡಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಅವರು ಆದೇಶಿಸಿದ್ದಾರೆ.

ಆ.28 ರಂದು ಗೋವಿನಕೆರೆ ಗ್ರಾಮ ಪಂಚಾಯಿತಿ ಸದಸ್ಯ ರಾಮು ಅವರ ಮನೆಗೆ ಊಟಕ್ಕೆಂದು ಬಂದಾಗ ಘಟನೆ ನಡೆದಿತ್ತು. ಮನೆಯ ಮಹಡಿ ಮೇಲೆ ಮದ್ಯ ಪಾನ ಮಾಡುತ್ತಿದ್ದಾಗ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಚುನಾವಣೆ ವಿಚಾರ ಪ್ರಸ್ತಾಪಿಸಿ ಗಲಾಟೆ ಮಾಡಿ ಕೊಂಡಿದ್ದರು. ರಾಮಸ್ವಾಮಿ ಹಿರೀಸಾವೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ಜೆ.ಸತೀಶ್ ಅವರಿಗೆ ಗಾಜಿನ ಬಾಟಲಿಯಿಂದ ಹೊಡೆದು ಗಾಯಗೊಳಿಸಿದ್ದರು. ಈ ಸಂಬಂಧ ಚನ್ನರಾಯ ಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

## ಹೆಚ್ಚುವರಿ ಶಿಕ್ಷಕರ ವರ್ಗಾವಣೆ ಖಂಡಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಹೆಚ್ಚುವರಿ ಶಿಕ್ಷಕರ ವರ್ಗಾವಣೆ ನೆಪದಲ್ಲಿ ದೂರದ ಶಾಲೆಗಳಿಗೆ ಕಳುಹಿಸಿಕೊಡುವ ಮೂಲಕ ನಿವೃತ್ತಿ ಅಂಚಿನಲ್ಲಿರುವ ಶಿಕ್ಷಕರಿಗೆ ಅನ್ಯಾಯ ವ'ಾಡ'ಲಾಗ'ುತ್ತಿ ದ'ಯೆಂದ'ು ಆರೋಪಿಸಿ ಶುಕ್ರವಾರ ನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಎದುರು ಶಿಕ್ಷಕರು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ 98 ಜನರು ಹೆಚ್ಚುವರಿ ಶಿಕ್ಷಕರ ಪಟ್ಟಿಯಲ್ಲಿದ್ದಾರೆ. ಶಾಲಾ ದಾಖಲಾತಿ ಕುಸಿತ, ಅಗತ್ಯಕ್ಕಿಂತ ಹೆಚ್ಚು ಶಿಕ್ಷಕರಿದ್ದರೆ ಅಂತಹವರ ಪಟ್ಟಿ ಮಾಡಿ ಶಿಕ್ಷಣ ಇಲಾಖೆಗೆ ಕಳುಹಿಸಲಾಗಿದೆ. ವರ್ಗಾವಣೆ ಪಟ್ಟಿಯಲ್ಲಿದ್ದ 98 ಶಿಕ್ಷಕರಲ್ಲಿ 14 ಜನರಿಗೆ ದಂಪತಿ ವರ್ಗ ಅವಕಾಶದಡಿ ಹಾಸನ ತಾಲ್ಲೂಕು ಸಿಕ್ಕಿದೆ. ಇನ್ನು 16 ಶಿಕ್ಷಕರನ್ನು ಕರ್ನಾಟಕ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (ಜಿಪಿಎಸ್‌ಟಿಆರ್) ಅಡಿಯಲ್ಲಿ ಪರಿಗಣಿಸಲಾಗಿದೆ. ಉಳಿದ 68 ಶಿಕ್ಷಕರು ತಾವು ಮಾಡದ ತಪ್ಪಿಗೆ ಬೇರೆ ತಾಲ್ಲೂಕಿನ ದೂರದ ಶಾಲೆಗೆ ಹೋಗಬೇಕಾಗಿದೆ. ಇನ್ನೂ ಶೇ.20 ರಷ್ಟು ಶಿಕ್ಷಕರ ನಿಯೋಜನೆಗೆ ಅವಕಾಶವಿದೆಯಾದರೂ ಸರ್ಕಾರ ವರ್ಗಾವಣೆ ಪ್ರಕ್ರಿಯೆಗಾಗಿ ಕಾಯ್ದಿರಿಸಿಕೊಂಡಿದೆ.



ಇಲ್ಲಿಗೆ ಜಿಪಿಎಸ್‌ಟಿಆರ್ ಶಿಕ್ಷಕರು ಬಂದರೆ ಇಷ್ಟು ವರ್ಷಗಳ ಕಾಲ ಕೆಲಸ ಮಾಡಿದ ನಾವು ಮೂಲೆಗುಂಪಾಗುತ್ತೇವೆಂದು ಅಸಮಾಧಾನ ವ್ಯಕ್ತಪಡಿಸಿದರು.

2006ಕ್ಕಿಂತ ಮೊದಲು ಸೇವೆಗೆ ಸೇರಿದ ಶಿಕ್ಷಕರು ಕೇವಲ ಪೂರ್ವ ಪ್ರಾಥಮಿಕ ಮಕ್ಕಳಿಗೆ ಕಲಿಸಲು ಅರ್ಹರು. ಆ ನಂತರ ಬಂದ ಶಿಕ್ಷಕರು ಟಿಇಟಿ ಪರೀಕ್ಷೆ ಬರೆದವರಾದ್ದರಿಂದ ಅವರನ್ನು ಹಿರಿಯ ಪ್ರಾಥಮಿಕ ಶಾಲೆಗೆ ಪರಿಗಣಿಸುವ ನಿರ್ಧಾರವೇ ಅವೈಜ್ಞಾನಿಕವಾಗಿದೆ. ದಶಕಗಳಿಂದ ಪಠ್ಯ ಬೋಧನೆಯಲ್ಲೇ ತೊಡಗಿರುವ ನಮಗೆ » ನಾಲ್ಕನೇ ಪುಟದಲ್ಲಿ

## ಕನ್ನಡ ಜಾಗೃತಿ ಸಮಿತಿ ಸದಸ್ಯರಾಗಿ ಪತ್ರಕರ್ತ ಕೆ.ಜಿ.ಸುರೇಶ್

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕನ್ನಡ ಜಾಗೃತಿ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ಸರ್ಕಾರ ನೇಮಕ ಮಾಡಿದ್ದು ಹಾಸನದ ಪತ್ರಕರ್ತ ಕೆ.ಜಿ.ಸುರೇಶ್ ಸೇರಿ ಜಿಲ್ಲೆಯ ಐವರು ಅರ್ಹತೆ ಪಡೆದಿದ್ದಾರೆ.



ಕೆ.ಜಿ.ಸುರೇಶ್, ಎ.ಆರ್. ಸುದರ್ಶನ್‌ಬಾಬು, ರತಿ, ಕೆ.ರಾಘವೇಂದ್ರಕುಮಾರ್, ಬಿ.ಆರ್. ಪುಟ್ಟೇಗೌಡ ಸ್ಥಾನ ಪಡೆದಿದ್ದಾರೆ.

ರಾಜ್ಯದ 11 ಮಹಾನಗರ ಪಾಲಿಕೆ, ಬೆಂಗಳೂರು ಮಹಾನಗರ ಪಾಲಿಕೆಯ ವಿಧಾನಸಭಾ ಕ್ಷೇತ್ರ ಹಾಗು ರಾಜ್ಯದ 30 ಜಿಲ್ಲೆಗಳಲ್ಲಿ ಕನ್ನಡ ಜಾಗೃತಿ ಸಮಿತಿಗೆ ಸದಸ್ಯರ ನೇಮಿಸಲಾಗಿದೆ. ಪ್ರತಿ ಜಿಲ್ಲೆಗೆ 5 ಸದಸ್ಯರಂತೆ 31 ಜಿಲ್ಲೆಗಳಿಗೆ 155 ಸದಸ್ಯರು, ಮಹಾನಗರ ಪಾಲಿಕೆಗೆ ತಲಾ 6 ರಂತೆ 66 ಹಾಗು ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಿಗೆ 249 ಸದಸ್ಯರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಆರ್. ರಮೇಶ್ ಆದೇಶಿಸಿದ್ದಾರೆ.

### ಜೂಜು ಅಡ್ಡೆ ಮೇಲೆ ದಾಳಿ : 20 ಲಕ್ಷ ರೂ. ವಶ

**ಹಾಸನ:** ಸಮೀಪದ ಉದ್ದೂರಿನ ಸಾರ್ವಜನಿಕ ಸ್ಥಳದಲ್ಲಿ ಜೂಜಾ ಡುತ್ತಿದ್ದ 11 ಜನರನ್ನು ಬಂಧಿಸಿರುವ ಡಿಸಿಆರ್‌ಬಿ ಪೊಲೀಸರು ಪಣಕ್ಕಿಟ್ಟಿದ್ದ 20 ಲಕ್ಷ ರೂ. ವಶಕ್ಕೆ ಪಡೆದಿದ್ದಾರೆ.

ಅರಸೀಕೆರೆ ತಾಲ್ಲೂಕು ಡಿ.ಎಂ.ಕುರ್ಕೆ ಗ್ರಾಮದ ತಮ್ಮಯ್ಯ, ಸಕಲೇಶಪುರ ತಾಲ್ಲೂಕು ಚಂಗಡಿಹಳ್ಳಿಯ ಜಿತೇಂದ್ರ, ಯಸಳೂರಿನ ಜಲೇಂದ್ರ, ನಾಗಮಂಗಲ ತಾಲ್ಲೂಕು ಬೆಳ್ಳೂರು ಗ್ರಾಮದ ವಿಜಯ ಕುಮಾರ್, ತಿಪಟೂರು ತಾಲ್ಲೂಕು ಮಾರನಕೆರೆ ಗ್ರಾಮದ ಶಾಂತಪ್ಪ, ಬೆಣ್ಣೇನಹಳ್ಳಿಯ ಶಶಿಕುಮಾರ್, ಕಡೂರು ತಾಲ್ಲೂಕು ಚಿಕ್ಕ ಬೆಳ್ಳಿಕೆರೆಯ ಅಶೋಕ, ಅರಸೀಕೆರೆಯ ಸರ್ವರ್ ಖಾನ್, ಹಾಸನದ ಸುಮನ್ ,ಬೂವನಹಳ್ಳಿಯ ಕುಮಾರ್ ಹಾಗು ಅರಸೀಕೆರೆ ಮಾರುತಿ ನಗರದ ಕಿರಣ್ ಬಂಧಿತರು. ಗುರುವಾರ ರಾತ್ರಿ 9.30ರ ಸಮ ಯದಲ್ಲಿ ಉದ್ದೂರು ಗ್ರಾಮ ಹತ್ತಿರದ ಲೇಔಟ್ ಪಕ್ಕದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಜೂಜಾಡುತ್ತಿದ್ದಾರೆಂಬ ಖಚಿತ ಮಾಹಿತಿ ಮೇರೆಗೆ ಡಿಸಿಆರ್‌ಬಿ ಪಿಐ ವಿನಯ್ ಹಾಗು ಸಿಬ್ಬಂದಿ ದಾಳಿ ನಡೆಸಿದ್ದರು. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದೇವಸ್ಥಾನದಲ್ಲಿ ಕಳ್ಳತನ: ಒಂದೇ ಕುಟುಂಬದ ನಾಲ್ವರ ಬಂಧನ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಆನೆಮಹಲ್ ನಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಕಳ್ಳತನ ಮಾಡಲು ಯತ್ನಿಸುತ್ತಿದ್ದ ಗ್ಯಾಂಗ್ ಸದಸ್ಯರನ್ನು ಸ್ಥಳೀಯರ ನೆರವಿನಿಂದ ಪೊಲೀಸರು ಸಿನಿಮೀಯ ರೀತಿಯಲ್ಲಿ ಬೆನ್ನಟ್ಟಿ ಹಿಡಿದಿರುವ ಘಟನೆ ನಡೆದಿದೆ.

ರಾಜೇಂದ್ರ ಮತ್ತು ಮಮತಾ ದಂಪತಿ ಹಾಗು ಇನ್ನಿಬ್ಬರು ಅಪ್ರಾಪ್ತರು ಕೃತ್ಯದಲ್ಲಿ ಭಾಗಿಯಾ ಗಿದ್ದರು. ಬೇಲೂರು ತಾಲ್ಲೂಕಿನ ಅರೇಹಳ್ಳಿಯ ಕಾಫಿ ತೋಟವೊಂದರಲ್ಲಿ ಕಾರ್ಮಿಕರಾಗಿ ಕೆಲಸ ಮಾಡಿಕೊಂಡಿರುವುದಾಗಿ ತಿಳಿಸಿದ್ದಾರೆ. ನಾಲ್ವರು ಒಂದೇ ಕುಟುಂಬದ ಸದಸ್ಯರಾಗಿದ್ದಾರೆ. ಈ ತಂಡವು ದೇವಸ್ಥಾನದಲ್ಲಿ ತಾಮ್ರದ ವಸ್ತುಗಳು, ಹುಂಡಿಯ ಹಣ ಹಾಗು ಪೂಜಾ ಸಾಮಾಗ್ರಿ ಕದ್ದು ಪರಾರಿಯಾಗಲು ಯತ್ನಿಸುತ್ತಿದ್ದರು.

ಈ ಗ್ಯಾಂಗ್ ಹಳ್ಳಿ ಹಳ್ಳಿಗೆ ತೆರಳಿ ಅನಾಥಾಶ್ರಮಕ್ಕೆ ಹಣ, ಬಟ್ಟೆ ಸಂಗ್ರಹಣೆ ಮಾಡುವ ಹೆಸರಿನಲ್ಲಿ ದೇಣಿಗೆ ಪಡೆದು ಮೋಸ ಮಾಡುತ್ತಿದ್ದ ಖತರ್ನಾಕ್ ತಂಡವಾಗಿದೆ. ದೇವಸ್ಥಾನಗಳಲ್ಲಿ ಕಳ್ಳತನ ಮಾಡುವುದನ್ನೂ ಸಹ ನಿಯಮಿತವಾಗಿ ಮಾಡುತ್ತಿದ್ದರು ಎಂದು ಶಂಕಿಸಲಾಗಿದೆ. ನಾಲ್ವರು ಪೊಲೀಸರ ವಶದಲ್ಲಿದ್ದು ವಿಚಾರಣೆ ಮುಂದುವರಿದಿದೆ.

### ವಯಸ್ಕರ ಶಿಕ್ಷಣ ಇಲಾಖೆಯಿಂದ ವರ್ಷದ ಯೋಜನೆ | ಜಿಲ್ಲಾ ಸಾಕ್ಷರತಾ ಪ್ರಮಾಣ ಶೇ. 81.05

## ಜಿಲ್ಲೆಯ 17,856 ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಗುರಿ

• ಪ್ರಜೋದಯ ವರದಿ

**ಹಾಸನ:** ವಯಸ್ಕರಿಗೆ ಓದು ಬರಹ ಕಲಿಸಿ 2027ರ ವೇಳೆಗೆ ಜಿಲ್ಲೆಯನ್ನು ಸಂಪೂರ್ಣ ಸಾಕ್ಷರತಾ ಜಿಲ್ಲೆಯಾಗಿಸುವ ಉದ್ದೇಶದಿಂದ ಮಹತ್ವದ ಯೋಜನೆ ಹಾಕಿಕೊಂಡಿದ್ದು 27 ಗ್ರಾಮ ಪಂಚಾಯಿತಿ ವ್ಯಾಪ್ತಿಯ 17,856 ಅನಕ್ಷರಸ್ಥರಿಗೆ ಅಕ್ಷರ ಹೇಳಿಕೊಡಲು ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವರದಿ ಆಧರಿಸಿ ಪಂಚಾಯಿತಿಗಳನ್ನು ಆರಿಸಿಕೊಳ್ಳಲಾಗಿದೆ. ರಾಜ್ಯ ಸರ್ಕಾರ 1 ಸಾವಿರ ಗ್ರಾಮ ಪಂಚಾಯಿತಿಗಳಲ್ಲಿ ಹಾಸನದ 27 ಪಂಚಾಯಿತಿಗಳು ಸೇರಿವೆ.

**ಗ್ರಾಮ ಪಂಚಾಯಿತಿಗಳ ವಿವರ**

ಆಲೂರು ತಾಲ್ಲೂಕು ಮಗ್ಗೆ ಗ್ರಾಮ ಪಂಚಾಯಿತಿಯ 1,200 ಜನರು, ಅರಕಲಗೂಡು ತಾಲ್ಲೂಕಿನ ಬಸವಾಪಟ್ಟಣ, ಕೊಣನೂರು, ಹೊಳಲಗೂಡು, ಹೊನ್ನವಳ್ಳಿಯಿಂದ 2,956, ಅರಸೀಕೆರೆ ತಾಲ್ಲೂಕು ಗ್ರಾಮ ಪಂಚಾಯಿತಿಗಳಾದ ಉಂಡಿಗನಾಡು, ಮುರುಂಡಿ, ಕರಗುಂದ, ದುಮ್ಮೇನಹಳ್ಳಿಯ 2,900, ಬೇಲೂರಿನ ಅರೇಹಳ್ಳಿ, ಕುಶಾವರ, ಬಿಕ್ಕೋಡು, ಲಕ್ಕುಂದ ಗ್ರಾಮ ಪಂಚಾಯಿತಿಯ 2,500, ಚನ್ನರಾಯ ಪಟ್ಟಣ ತಾಲ್ಲೂಕಿನ ಕೆಂಬಾಳು, ಕಾರೆಹಳ್ಳಿ, ತಗಡೂರು ಗ್ರಾಮ ಪಂಚಾಯಿತಿ 2,800, ಹಾಸನದ ಜಾಗರವಳ್ಳಿ, ಮಡೆನೂರು, ಮೊಸಳೆ ಹೊಸಳ್ಳಿ, ಅಂಕಪುರದ 1,500, ಹೊಳೆನರಸೀಪುರ ತಾಲ್ಲೂಕಿನ ಪಂಚಾಯಿತಿಗಳಾದ ಹಳ್ಳಿಮೈಸೂರು, ಬಿದರಕ್ಕ, ನಿಡುವಣೆಯ 2,000 ಹಾಗು ಸಕಲೇಶಪುರದ ಮಳಲಿ, ಬ್ಯಾಕರವಳ್ಳಿ, ಐಗೂರು ಹಾಗು ಯಸಳೂರಿನ 2,000 ಅನಕ್ಷರಸ್ಥರನ್ನು ಯೋಜನೆಯಡಿ ಪರಿಗಣಿಸಲಾಗಿದೆ.

**173 ಗ್ರಾಮ ಪಂಚಾಯಿತಿ ಸದಸ್ಯರಿಗೆ ಕಲಿಕೆ**

ಜಿಲ್ಲೆಯ ಪ್ರಸ್ತುತ ಸಾಕ್ಷರತಾ ಪ್ರಮಾಣ ಶೇ.81.05 ರಷ್ಟಿದೆ. ಶೇ.87 ಪುರುಷರು ಹಾಗು ಶೇ. 76 ಮಹಿಳೆಯರು ಅಕ್ಷರ ಬಲ್ಲವರಾಗಿದ್ದಾರೆ. 2024-25ನೇ ಸಾಲಿನಡಿ ಗ್ರಾಮ ಪಂಚಾಯಿತಿ ಅನಕ್ಷರಸ್ಥ ಚುನಾಯಿತ ಪ್ರತಿನಿಧಿಗಳನ್ನು ಸಾಕ್ಷರರನ್ನಾಗಿಸುವ ಸಾಕ್ಷರ ಸನ್ಮಾನ ಕಾರ್ಯಕ್ರಮದಡಿ 223 ಸದಸ್ಯರನ್ನು ಗುರುತಿಸಲಾಗಿತ್ತು. ಅದರಲ್ಲಿ 173 ಜನಪ್ರತಿನಿಧಿಗಳಿಗೆ ಓದು, ಬರಹ, ಸರಳ ಲೆಕ್ಕಾಚಾರ ಕಲಿಸಲಾಗಿದೆ. ಸಭಾ ನೋಟೀಸ್, ನಡಾವಳಿ ಮತ್ತು ಮಾರ್ಗಸೂಚಿಗಳನ್ನು ಸ್ವತಃ ಓದಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಂಡಿದ್ದಾರೆ.



**ಎಲ್ಲರೂ ಶಿಕ್ಷಿತರಾಗಬೇಕೆಂಬ ಉದ್ದೇಶದಿಂದ ಉಲ್ಲಾಸ್ ನವ ಭಾರತ್ ಸಾಕ್ಷರತಾ, ಸಾವಿರ ಗ್ರಾಮ ಪಂಚಾಯಿತಿ ಸಂಪೂರ್ಣ ಸಾಕ್ಷರತಾ, ಮೂಲ ಸಾಕ್ಷರತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 2009-10ನೇ ಸಾಲಿನಿಂದ 2024-25ನೇ ಸಾಲಿನ ವರೆಗೆ ಒಟ್ಟು 854446 ಅನ ಕ್ಷರಸ್ಥರನ್ನು ನವ ಸಾಕ್ಷರರನ್ನಾಗಿ ಮಾಡಲಾಗಿದೆ.**
**-ಎಂ.ಕಾಂತರಾಜು,** ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ

**898 ಸ್ವಯಂ ಸೇವಕ ಬೋಧಕರು**

ಅನಕ್ಷರತೆಯ ಕಳಂಕದಿಂದ ಹೊರಬರಬೇಕೆಂದು » ನಾಲ್ಕನೇ ಪುಟದಲ್ಲಿ

C M Y K C M Y K C M Y K C M Y K

E-mail : prajodayahsn@gmail.com

ಪ್ರಜೋದಯ

# ತಂಬಾಕು ವಿಶ್ವವ್ಯಾಪಿಯಾಗಲು ಗ್ರಹಣಗಳೇ ಕಾರಣವಾದವು!

ನಮ್ಮ ಜಗತ್ತಿನಲ್ಲಿ ಐದು ಪ್ರಾಚೀನ ನಾಗರಿಕತೆಗಳು ಸ್ವತಂತ್ರವಾಗಿ ಉದಯಿಸಿದವು. ಮೆಸೊಪೊಟೋಮಿಯನ್, ಈಜಿಪ್ಷಿಯನ್, ಸಿಂಧು-ಸರಸ್ವತಿ, ಪ್ರಾಚೀನ ಚೀನಾ ಮತ್ತು ಆಂಡಿಯನ್ ನಾಗರಿಕತೆಗಳು. ಇವನ್ನು ನಾಗರಿಕತೆಯ ತೊಟ್ಟಿಲು ಎಂದು ಕರೆಯಬಹುದು. ಈ ಮನುಕುಲಗಳು ಇತರ ಸಂಸ್ಕೃತಿಗಳ ಸೋಂಕಿಲ್ಲದೆ ಸ್ವತಂತ್ರವಾಗಿ ಬೆಳೆದವು ಎನ್ನಬಹುದು.

ಆಂಡಿಯನ್ ನಾಗರಿಕತೆಯು ದಕ್ಷಿಣ ಅಮೆರಿಕದ ಆಂಡೀಸ್ ಪರ್ವತ ಶ್ರೇಣಿಯಲ್ಲಿ ಬಾಳಿ ಬದುಕಿತು. ಇಂದಿನ ಕೊಲಂಬಿಯಾ, ಯೂಕಡರ್, ಪೆರು, ಚಿಲಿ ಮತ್ತು ಅರ್ಜೆಂಟೀನಾದ ಕೆಲವು ಭಾಗಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಇದು ಸುಮಾರು 7000 ಕಿ.ಮೀ. ಉದ್ದದ ಪ್ರದೇಶ. ಕ್ರಿ.ಪೂ.15000 ವರ್ಷಗಳು.

ಮನುಷ್ಯರು ಈ ಪ್ರದೇಶದಲ್ಲಿ ಬೇಟೆಯಾಡುತ್ತಾ, ಹಣ್ಣು ಹಂಪಲುಗಳನ್ನು ಸಂಗ್ರಹಿಸುತ್ತಾ ಬದುಕುತ್ತಿದ್ದರು. ಕಾಲಕ್ರಮೇಣ ಇವರು ತಮ್ಮದೇ ಆದ ಸಂಸ್ಕೃತಿಗಳನ್ನು ಕಟ್ಟಲಾರಂಭಿಸಿದರು. ಹಾಗಾಗಿ ಇಲ್ಲಿ ಹಲವು ಸಂಸ್ಕೃತಿಗಳು ಹುಟ್ಟಿ, ಬೆಳೆದು ಅಸ್ತಮಿಸಿದವು. ಅವುಗಳಲ್ಲಿ ಮುಖ್ಯವಾದವು ಕಾರಲ್, ವಾಲ್ಡಿವಿಯ, ಚಾವಿನ್, ನಾಜ್ಕ, ಮೋಷೆ, ಚಾಚಾಪೋಯಾಸ್, ವಾತಿ, ತಿವನಾಕು ಮತ್ತು ಚೀಮು.

ಕ್ರಿ.ಶ.1151-ಕ್ರಿ.ಶ.1477ರ ನಡುವೆ ಅಯಮಾರ ಸಾಮ್ರಾಜ್ಯವು ಆರಂಭವಾಯಿತು. ಇದರ ನಂತರ ವಿಶ್ವವಿಖ್ಯಾತ ಇಂಕಾ ಸಾಮ್ರಾಜ್ಯವು ಸ್ಥಾಪನೆಯಾಯಿತು. ಇದು ಕ್ರಿ.ಶ.1438-ಕ್ರಿ.ಶ.1533ರವರೆಗೆ ಮುಂದುವರಿಯಿತು. ಯುರೋಪಿನ ಸ್ಪ್ಯಾನಿಶ್ ನಾವಿಕರು ಆಕ್ರಮಣಕಾರರಾಗಿ ಈ ಸಂಸ್ಕೃತಿಯನ್ನು ನಾಶಪಡಿಸಿದ್ದು ಮರೆಯಲಾಗದ ರಕ್ತಸಿಕ್ತ ಇತಿಹಾಸವಾಗಿದೆ. ಇಂಕಾ ಸಾಮ್ರಾಜ್ಯದ ಜನರು ಮುಗ್ಧರು ಹಾಗೂ ಪ್ರಾಮಾಣಿಕರು. ಕೃಷಿ ಮತ್ತು ಹೈನುಗಾರಿಕೆಯು ಇವರ ಮುಖ್ಯ ಕಸುಬಾಗಿತ್ತು. ಜೋಳ, ಆಲೂಗಡ್ಡೆ, ಕಿನೋವ, ಟೊಮೇಟೊ, ದಪ್ಪಮೆಣಸಿನಕಾಯಿ, ಹತ್ತಿ, ಕೋಕೋ, ತಂಬಾಕು, ಅನಾನಸು, ಕಡಲೆಕಾಯಿಬೀಜ ಹಾಗೂ ನಾನಾ ರೀತಿಯ ಅವರೆಗಳನ್ನು ಬೆಳೆಯುತ್ತಿದ್ದರು. ಬಿ.ಜಿ.ಎಲ್. ಸ್ವಾಮಿಯವರು ತಮ್ಮ ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ ಎನ್ನುವ ಪುಸ್ತಕದಲ್ಲಿ ಮೆಕ್ಕೆಜೋಳ, ಆಲೂಗಡ್ಡೆ, ಟೊಮೇಟೊ, ಮೆಣಸಿನಕಾಯಿ, ತಂಬಾಕು, ಅನಾನಸು, ಕಡಲೆಕಾಯಿಬೀಜ, ಕೋಕೋ ಮುಂತಾದವು ಹೇಗೆ ದಕ್ಷಿಣ ಅಮೆರಿಕದಿಂದ ಭಾರತಕ್ಕೆ ಬಂದವು ಎಂಬುದರ ಬಗ್ಗೆ ಸೊಗಸಾಗಿ ಬರೆದಿದ್ದಾರೆ.

ಇದು ಕನ್ನಡಿಗರು ಓದಲೇಬೇಕಾದಂಥ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿದೆ. ಇಂಕಾ ಸಾಮ್ರಾಜ್ಯದವರು ಬಹುದೇವತಾ ಆರಾಧನೆಯನ್ನು ಮಾಡುತ್ತಿದ್ದರು. ವಿರಾಕೋಚ ಮೂರು ಲೋಕಗಳನ್ನು ಸೃಜಿಸಿದ. ಅಪು ಇಲ್ಲಪು ಮಳೆದೇವತೆ, ಇಲ್ಲಪ ಗುಡುಗು ಸಿಡಿಲಿನ ದೇವತೆ, ಇಂತಿ ಸೂರ್ಯದೇವ ಹಾಗೂ ಮಮಾಕ್ವಿಲ್ಲ ಚಂದ್ರ ದೇವತೆ. ಈಕೆಯು ಸೂರ್ಯನ ಮಡದಿ. ಹೀಗೆ ಇವರು ಪ್ರಕೃತಿಯ ಒಂದೊಂದು ಆಯಾಮಕ್ಕೂ ಒಂದೊಂದು ದೈವವು ಕಾರಣ ಎಂದು ನಂಬಿದ್ದರು.

ದೇವರು ಹಾಗೂ ಮನುಷ್ಯರ ನಡುವೆ ಶಮನ್ ಅಥವಾ ಶಾಮನ್ ಎಂದು ಹೆಸರಾಗಿದ್ದ ಅಭಿಚಾರಿ ವೈದ್ಯರು ಮಧ್ಯವರ್ತಿಗಳಾಗಿದ್ದರು. ನಮ್ಮ ಪುರೋಹಿತರು ಇದ್ದಹಾಗೆ. ಮಾಚು ಪಿಚ್ಚುವಿನಲ್ಲಿದ್ದ ಅಭಿಚಾರಿಗಳಿಗೆ ಮೂಲಭೂತ ಖಗೋಳ ವಿಜ್ಞಾನದ ಬಗ್ಗೆ ಮಾಹಿತಿಯಿತ್ತು. ಹಾಗಾಗಿ ಅವರು ಋತು ಬದಲಾವಣೆಯನ್ನು ನಿಖರವಾಗಿ ಹೇಳುತ್ತಿದ್ದರು. ಹಾಗೆಯೇ ಗ್ರಹಣಗಳು ಸಂಭವಿಸುವುದನ್ನು ಮುಂಚಿತವಾಗಿ ತಿಳಿಯಬಲ್ಲವರಾಗಿದ್ದರು.

ಇಂಕಾ ಸಂಸ್ಕೃತಿಯಲ್ಲಿ ಗ್ರಹಣಗಳು ಬಹಳ ಮುಖ್ಯವಾಗಿದ್ದವು. ಇವರ ಸೂರ್ಯ ದೇವರಾದ ಇಂತಿಗೆ ತುಂಬಾ ಬೇಸರವಾದರೆ ಅಥವಾ ಕೋಪಗೊಂಡರೆ ಮರೆಯಾಗಿ ಬಿಡುತ್ತಿದ್ದ. ಸೂರ್ಯನು ಅವರ ಮುಖ್ಯ ದೇವಾನುದೇವತೆಗಳಲ್ಲಿ ಒಬ್ಬನಾಗಿದ್ದ. ಇಂಥ ಶಕ್ತಿಶಾಲಿ ದೇವತೆಯು ಇದ್ದಕ್ಕಿದ್ದ ಹಾಗೆ ಮರೆಯಾದರೆ, ಬಹುಶಃ ಬಾನಿನಲ್ಲಿರುವ ಪ್ಯೂಮ ಅಥವಾ ಜಾಗ್ವರ್‌ನಂಥ ಹಿಂಸ್ರ ಪ್ರಾಣಿಯು ಇಂತಿಯ ಮೇಲೆ ಆಕ್ರಮಣ ಮಾಡುತ್ತಿರಬೇಕು ಎಂದು ಭಾವಿಸಿದ್ದರು.

ಸೂರ್ಯನ ಹೆಂಡತಿ ಮಾಮಾಕ್ವಿಲ್ಲ ಎಂಬ ಚಂದ್ರ. ಚಂದ್ರ ಗ್ರಹಣವಾದಾಗ ಬಾನಿನಲ್ಲಿ ಒಂದು ಕದನವು ನಡೆಯುತ್ತಿದೆ ಎಂಬುದು ಅವರ ಗ್ರಹಿಕೆ. ಚಂದ್ರಗ್ರಹಣದ ಸಂದರ್ಭದಲ್ಲಿ ರ್‍ಯಾಲೆ ಪರಿಣಾಮದ (ಬೆಳಕಿನ ಏಳು ಬಣ್ಣದಲ್ಲಿ ಕೆಂಪು ಬಣ್ಣ ಮಾತ್ರ ಚೆದುರುತ್ತದೆ) ಕಾರಣ ಚಂದ್ರನು ಕೆಂಪು ಬಣ್ಣವನ್ನು ತಳೆಯುತ್ತಾನೆ. ಇಂದಿನ ದಿನಗಳಲ್ಲಿ ನಾವು ಇದನ್ನು ಬ್ಲಡ್ ಮೂನ್ ಎಂದು ಕರೆಯುತ್ತೇವೆ. ಹಾಗಿರುವಾಗ ಇಂಕಾ ಜನರು ಕೆಂಪಾಗಿರುವ ಚಂದ್ರನನ್ನು ನೋಡಿ, ಅದು ಮಾಮಾಕ್ವಿಲ್ಲ ಹಾಗೂ ಮಹಾಸರ್ಪದ ನಡುವೆ ನಡೆಯುವ ಹೋರಾಟ ಎಂದೇ ಭಾವಿಸಿದ್ದರು. ಈ ಹೋರಾಟದಲ್ಲಿ ತುಂಬಾ ರಕ್ತವು ಹರಿಯುತ್ತಿದ್ದ ಕಾರಣ, ಮಾಮಾಕ್ವಿಲ್ಲ ರಕ್ತದಲ್ಲಿ ಮುಳುಗಿದ್ದಾಳೆ ಎಂದು ಎಲ್ಲರೂ ದುಃಖ ಪಡುತ್ತಿದ್ದರು.

ಆ ಸಮಯದಲ್ಲಿ ಅಭಿಚಾರಿ ವೈದ್ಯರು ಜನಸಾಮಾನ್ಯರಿಗೆ ಧೈರ್ಯವನ್ನು ನೀಡಿ ತಾವು ಆ ದುಷ್ಟ ಪ್ರಾಣಿಗಳನ್ನು ಓಡಿಸುವುದಾಗಿ ಭರವಸೆಯನ್ನು ನೀಡುತ್ತಿದ್ದರು. ಜನರೆಲ್ಲರೂ ಬೆಟ್ಟದ ಮೇಲಿನ ಸಮತಳದಲ್ಲಿ ಸೇರುತ್ತಿದ್ದರು. ಅಭಿಚಾರಿಗಳು ಜೋರಾಗಿ ಮಂತ್ರವನ್ನು ಪಠಿಸುತ್ತಿದ್ದರೆ, ಜನರೆಲ್ಲ ಭೀಕರ ರಣವಾದ್ಯಗಳನ್ನು ನುಡಿಸುತ್ತಾ ದುಷ್ಟ ಶಕ್ತಿಗಳನ್ನು ಹೆದರಿಸಲು ಪ್ರಯತ್ನಿಸುತ್ತಿದ್ದರು. ತಾವು ಸೇವಿಸುತ್ತಿದ್ದ ಎಲ್ಲ ಆಹಾರ ಪದಾರ್ಥಗಳ ಜತೆಯಲ್ಲಿ ಚೀಚಾ ಎಂಬ ಮೆಕ್ಕೆಜೋಳದ ಮದ್ಯವನ್ನು ಅರ್ಪಿಸಿ ಲಾಮ ಎಂಬ



ಪ್ರಾಣಿಯನ್ನು ಬಲಿಗೊಡುತ್ತಿದ್ದರು. ಈ ಅವಧಿಯಲ್ಲಿ ಮುಖ್ಯ ಪುರೋಹಿತರು ಒಂದು ವಿಧಿಯನ್ನು ನಡೆಸುತ್ತಿದ್ದರು. ಉದ್ದನೆಯ ಕೊಳವೆಯ ತುದಿಯಲ್ಲಿ ಕೆಂಡವನ್ನಿರಿಸುತ್ತಿದ್ದರು. ಅದರಲ್ಲಿ ತಂಬಾಕಿನ ಒಣ ಎಲೆಗಳನ್ನು ತುಂಬುತ್ತಿದ್ದರು. ಆಗ ವಿಪರೀತ ಕೆಮ್ಮನ್ನೂ, ಕಣ್ಣಿನಲ್ಲಿ ನೀರನ್ನೂ ಹರಿಸುವ ಅತ್ಯಂತ ಘಾಟಿನ ದಟ್ಟ ಹೊಗೆ ಏಳುತ್ತಿತ್ತು. ಆ ಹೊಗೆಯನ್ನು ಗ್ರಹಣಕ್ಕೆ ಒಳಗಾದ ಸೂರ್ಯ/ಚಂದ್ರರ ಕಡೆಗೆ ಜೋರಾಗಿ ಊದುತ್ತಿದ್ದರು. ಕೆಮ್ಮುತ್ತಲೇ ಬಾನಿನ ಕಡೆಗೆ ಹೊಗೆಯನ್ನು ಊದುವಾಗ, ಒಂದಷ್ಟು ಹೊಗೆಯು ಅವರ ಶ್ವಾಸಕೋಶಗಳಲ್ಲಿ ಸೇರುತ್ತಿತ್ತು. ಅವರ ಪಾಲಿಗೆ ತಂಬಾಕು ಒಂದು ಪವಿತ್ರವಾದ ದೈವದತ್ತ ಸಸ್ಯ. ಔಷಧಿಯ ಸಸ್ಯ. ಸೂರ್ಯಚಂದ್ರರಿಗೆ ತೊಂದರೆಯಾದಾಗ, ಈ ಉಗ್ರ ಘಾಟಿನ ಹೊಗೆಯನ್ನು ಊದಿದರೆ, ಆ ಪ್ಯೂಮ/ಜಾಗ್ವ/ರ್ಮಹಾಸರ್ಪ ಓಡಿ ಹೋಗುತ್ತದೆ ಎನ್ನುವುದು ಅವರ ನಂಬಿಕೆ. ಆದರೆ ಅವರು ಅಕಸ್ಮಾತ್ ಹೊಗೆಯನ್ನು ಸೇವಿಸಿದಾಗ, ತಂಬಾಕಿನಲ್ಲಿರುವ ನಿಕೋಟಿನ್ ಮುಂತಾದ ರಾಸಾಯನಿಕಗಳು ರಕ್ತದಲ್ಲಿ ಬೆರೆತು ಮಿದುಳನ್ನು ತಲುಪುತ್ತಿದ್ದವು.

ಆಗ ಅವರು ಉತ್ತೇಜಿತರಾಗುತ್ತಿದ್ದರು. ಗ್ರಹಣವು ಬಿಟ್ಟ ಕೂಡಲೇ, ಅವರು ತಂಬಾಕಿನ ಪ್ರಭಾವದಲ್ಲಿ, ತಾವೆಲ್ಲರೂ ಸೇರಿ ಹೇಗೆ ಸೂರ್ಯ-ಚಂದ್ರರನ್ನು ಮುಕ್ತಗೊಳಿಸಿದೆವೆಂದು ಹೇಳುತ್ತಾ, ಈ ಗ್ರಹಣಗಳ ಭವಿಷ್ಯವನ್ನು ನುಡಿಯುತ್ತಿದ್ದರು. ತಂಬಾಕಿನ ಪ್ರಭಾವದಲ್ಲಿ ಅವರು ನುಡಿಯುತ್ತಿದ್ದ ಭವಿಷ್ಯವು ನಿಜವೇ ಆಗುತ್ತದೆ ಎಂದು ಎಲ್ಲರೂ ನಂಬಿದ್ದರು.

ತಂಬಾಕಿನ ಪ್ರಭಾವದಲ್ಲಿ ಭವಿಷ್ಯವನ್ನು ನುಡಿಯುತ್ತಾ ಇಂಕಾ ಅಭಿಚಾರಿ ವೈದ್ಯರು, ಇದೇ ತಂಬಾಕು ಜಗತ್ತಿನ ಜನರನ್ನು ಮಹಾ ದಾಸ್ಯದಲ್ಲಿ ನೂಕುತ್ತದೆ ಎನ್ನುವ ಭವಿಷ್ಯವನ್ನು ಮಾತ್ರ ಹೇಳದಾದರು. ವಿಜ್ಞಾನಿಗಳು ಇಂಕಾ ಸಾಮ್ರಾಜ್ಯದಲ್ಲಿ ಬೆಳೆಯುತ್ತಿದ್ದ ತಂಬಾಕನ್ನು ನಿಕೋಟಿ ಯಾನ ರಸ್ಟಿಕ ಎಂದು ಅದರ ಪ್ರಭೇದವನ್ನು ಗುರುತಿಸಿದ್ದಾರೆ. ನಾವು ಇಂದು ಬೀಡಿ ಮತ್ತು ಸಿಗರೇಟಿನಲ್ಲಿ ಬಳಸುತ್ತಿರುವ ತಂಬಾಕು ನಿಕೋಟಿಯಾನ ಟೊಬಾಕಮ್ ಎಂಬ ಪ್ರಭೇದ. ಈ ಪ್ರಭೇದದಲ್ಲಿ ನಿಕೋಟಿನ್ ಪ್ರಮಾಣವು ಶೇ.1-3ರಷ್ಟು ಮಾತ್ರ ಇರುತ್ತದೆ.

ನಿಕೋಟಿಯಾನ ರಸ್ಟಿಕದಲ್ಲಿ ನಿಕೋಟಿನ್ ಪ್ರಮಾಣವು ಸಾಮಾನ್ಯವಾಗಿ ಶೇ.4-9ರಷ್ಟು ಇರುತ್ತದೆ. ಕೆಲವು ನಮೂನೆಗಳಲ್ಲಿ ಶೇ.18ರಷ್ಟು ನಿಕೋಟಿನ್ ಇರುತ್ತದೆ. ಹಾಗಾಗಿ ಇಂಕಾ, ಮಾಯ (ಮಧ್ಯ ಅಮೆರಿಕ: ಇಂದಿನ ಗ್ವಾಟೆಮಾಲ, ಎಲ್ ಸಾಲ್ವಡರ್, ಬೆಲೀಜ್ ಮತ್ತು ಹೊಂಡುರಸ್), ಅಜ್ಟೆಕ್ (ಮಧ್ಯ ಅಮೆರಿಕ; ಪ್ರಧಾನವಾಗಿ ಮೆಕ್ಸಿಕೊ ದೇಶ) ಸಂಸ್ಕೃತಿಗಳಲ್ಲಿದ್ದ ಅಭಿಚಾರಿ ವೈದ್ಯರು ರಸ್ಟಿಕವನ್ನು ಬಳಸುತ್ತಿದ್ದರು.

ಇಂಕ ಸಂಸ್ಕೃತಿಯು ವ್ಯಾಪಿಸಿದ್ದ ಆಂಡೀಸ್ ಪರ್ವತ ಶ್ರೇಣಿಯಲ್ಲಿ ಕೋಕ ಮರಗಳು (ಎರಿಥ್ರೋಜೈಲಮ್ ಕೋಕ) ಬೆಳೆಯುತ್ತವೆ. ಇಂಕಾ ಅಭಿಚಾರಿ ವೈದ್ಯರಿಗೆ ರಸ್ಟಿಕದ ಪರಿಚಯವಿದ್ದ ಹಾಗೆ ಕೋಕ ಎಲೆಗಳ ಪರಿಚಯವು ಚೆನ್ನಾಗಿ ಇತ್ತು. ಇವೆರಡನ್ನೂ ಅವರು ತಮ್ಮ ಧಾರ್ಮಿಕ ವಿಧಿಗಳಲ್ಲಿ ಹಾಗೂ ವೈದ್ಯಕೀಯ ಚಿಕಿತ್ಸೆಯಲ್ಲಿ ಬಳಸುತ್ತಿದ್ದರು.

ಕಷ್ಟಪಟ್ಟು ದುಡಿಯುವ ಕಾರ್ಮಿಕ ವರ್ಗಕ್ಕೆ ಕೋಕ ಎಲೆಗಳ ಕಷಾಯವನ್ನು ನೀಡುತ್ತಿದ್ದರು. ಇದು ಪ್ರಧಾನವಾಗಿ ಹಸಿವನ್ನು ಕಡಿಮೆ ಮಾಡುತ್ತಿತ್ತು ಹಾಗೂ ಚೈತನ್ಯವನ್ನು ಹೆಚ್ಚಿಸುತ್ತಿತ್ತು. ಕೋಕ ಎಲೆಯಲ್ಲಿರುವ ಅತ್ಯಲ್ಪ ಪ್ರಮಾಣದ ಕೊಕೇನ್ ಇದಕ್ಕೆ ಕಾರಣ. ಇದು ಅಭಿಚಾರಿಗಳಿಗೆ ಗೊತ್ತಿತ್ತು. ಹಾಗಾಗಿ ಆಂಡೀಸ್ ಪರ್ವತ ಶ್ರೇಣಿಗಳಲ್ಲಿ ಬೆಟ್ಟ ಹತ್ತಿ ಇಳಿಯಲು ಬೇಕಾದ ಶಕ್ತಿಯನ್ನು ಒದಗಿಸಲು ಈ ಕೋಕ ಎಲೆಗಳನ್ನು ಬಳಸುತ್ತಿದ್ದರು.

ರಾಜರು, ಶ್ರೀಮಂತರು ಹಾಗೂ ಜನಸಾಮಾನ್ಯರು ಇಂಕಾ ಅಭಿಚಾರಿ ವೈದ್ಯರ ಬಳಿಗೆ ಭವಿಷ್ಯವನ್ನು ಕೇಳಲು ಬರುತ್ತಿದ್ದರು. ಮಳೆ ಬರುವ ಬಗ್ಗೆ ಮಾತ್ರವಲ್ಲದೆ, ಕೃಷಿ, ಹವಾಮಾನ, ಪ್ರಯಾಣ, ಯುದ್ಧ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದ ಹಾಗೆ ಮುಂದೇನಾಗುತ್ತದೆ ಎಂದು ತಿಳಿದುಕೊಳ್ಳುವ ಕುತೂಹಲವು ಅವರಿಗೆ ಇರುತ್ತಿತ್ತು.

ರಾಜನು ಭವಿಷ್ಯವನ್ನು ಕೇಳಲು ಬರುತ್ತಾನೆ ಎಂದರೆ ಅಭಿಚಾರಿವೈದ್ಯನು ಉಪವಾಸ ಇರುತ್ತಿದ್ದ. ರಾಜನು ಬಂದಾಗ, ಕೋಕ ಎಲೆಗಳ ಕಷಾಯವನ್ನು ಕುಡಿಯುತ್ತಿದ್ದ. ಆನಂತರ ರಸ್ಟಿಕ ತಂಬಾಕಿನ ಹೊಗೆಯನ್ನು ಸೇವಿಸುತ್ತಿದ್ದ. ಆಗ ನಿಕೋಟಿನ್, ಮಿದುಳಿನಲ್ಲಿದ್ದ ನಿಕೋಟಿನಿಕ್ ಅಸಿಟೈಲ್ ಕೋಲಿನ್ ರೆಸೆಪ್ಟಾರ್ ಎನ್ನುವ ಗ್ರಾಹಕದ ಸಂಪರ್ಕಕ್ಕೆ ಬರುತ್ತಿತ್ತು. ಕೂಡಲೇ ಅದು ಡೋಪಮಿನ್, ನಾರ್-ಎಪಿನೆಫ್ರಿನ್ ಮುಂತಾದ ನರ- ರಾಸಾಯನಿಕಗಳ ಬಿಡುಗಡೆಯನ್ನು ಹೆಚ್ಚಿಸುತ್ತಿತ್ತು.

ಮಿತ ಪ್ರಮಾಣದಲ್ಲಿ ಮಿದುಳು ಚುರುಕಾಗುತ್ತಿತ್ತು. ಸುತ್ತಮುತ್ತಲಿನ ಹಾಗೂ ಸಂದರ್ಭದ ವಿಶ್ಲೇಷಣೆಯನ್ನು ಮಾಡುವ ಶಕ್ತಿಯು ಹೆಚ್ಚುತ್ತಿತ್ತು. ಬಹುಶಃ ಆತ ತಾರ್ಕಿಕವಾಗಿ ಉತ್ತರವನ್ನು ಕೊಡುತ್ತಿದ್ದ. ದೈವ ಅಥವಾ ವಿಶಿಷ್ಟ ಶಕ್ತಿಗಳು ಭವಿಷ್ಯವನ್ನು ನುಡಿಸುತ್ತಿವೆ ಎಂದು ಜನರು ಭಾವಿಸುತ್ತಿದ್ದರು. ಆದರೆ ಕೋಕ ಕಷಾಯ ಹಾಗೂ ರಸ್ಟಿಕ ಹೊಗೆಯು ಮಿತಿಮೀರಿದರೆ, ಅಭಿಚಾರಿ ವೈದ್ಯನು ಭ್ರಮೆಗೆ ಒಳಗಾಗುತ್ತಿದ್ದ.

ತನ್ನ ಮಾತು ಮತ್ತು ನಡವಳಿಕೆಯ ಮೇಲೆ ನಿಯಂತ್ರಣವನ್ನು ಕಳೆದುಕೊಳ್ಳುತ್ತಿದ್ದ. ವಾಂತಿ ಮಾಡಿಕೊಂಡು ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದ್ದ. ದೈವಕ್ಕೆ ಮುನಿಸು ಬಂದಿದೆಯೆಂದು ಎಲ್ಲರೂ ಭಾವಿಸುತ್ತಿದ್ದರು. ಇಂಕಾ ಅಭಿಚಾರಿ ವೈದ್ಯರು ರಸ್ಟಿಕ ಧೂಮವನ್ನು ವೈದ್ಯಕೀಯ ವೃತ್ತಿಯಲ್ಲಿ ಬಳಸುತ್ತಿದ್ದರು. ಗಾಯಗಳ ಮೇಲೆ ರಸ್ಟಿಕ ಹೊಗೆಯನ್ನು ಊದುತ್ತಿದ್ದರು. ಗಾಯವು ಬೇಗ ಗುಣವಾಗುತ್ತದೆ ಎಂದು ನಂಬುತ್ತಿದ್ದರು.

ಗರ್ಭವತಿಯರ ಉಬ್ಬಿದ ಹೊಟ್ಟೆಯ ಮೇಲೆ ರಸ್ಟಿಕ ಹೊಗೆಯನ್ನು ಊದುತ್ತಿದ್ದರು. ಹೀಗೆ ಮಾಡುವುದರಿಂದ ಗರ್ಭಕ್ಕೆ ರಕ್ಷಣೆ ದೊರೆಯುತ್ತದೆ ಹಾಗೂ ಪ್ರಸವವು ಸುಲಭವಾಗುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು. ಕುಡಿಯುವ ನೀರಿನ ಮೇಲೆ ಹೊಗೆಯನ್ನು ಉಗುಳುತ್ತಿದ್ದರು. ಆ ನೀರನ್ನು ಟಾನಿಕ್‌ನಂತೆ ಕುಡಿಯುತ್ತಿದ್ದರು.

ಮೈಮೇಲೆ ಅಂಟಿಕೊಂಡು ರಕ್ತಹೀರುವ ಕೀಟಗಳನ್ನು ದೂರವಿಡಲು ತಂಬಾಕಿನ ರಸವನ್ನು ಚರ್ಮಕ್ಕೆ ಲೇಪಿಸುತ್ತಿದ್ದರು. ಹಾಗೆಯೇ ಕೀವುಗುಳ್ಳೆಯನ್ನು ಒಡೆಯಲು ತಂಬಾಕಿನ ಪೌಲ್ಟೀಸ್ ಕಟ್ಟುತ್ತಿದ್ದರು. 16ನೆಯ ಶತಮಾನದಲ್ಲಿ ಓರ್ವ ಸ್ಪ್ಯಾನಿಶ್ ಸೈನಿಕನಿಗೆ ಹಾವು ಕಚ್ಚಿತು. ಆಗ ಒಬ್ಬ ಅಭಿಚಾರಿವೈದ್ಯನು ತಂಬಾಕನ್ನು ಚೆನ್ನಾಗಿ ಅಗಿದು, ಹಾವು ಕಚ್ಚಿದ ಸ್ಥಳದಲ್ಲಿ ಮೆತ್ತಿದನಂತೆ. ಅದರಿಂದ ಸೈನಿಕನು ಗುಣ ಮುಖನಾದನಂತೆ. ಈ ವಿವರವು ಸ್ಪ್ಯಾನಿಶ್ ಬರಹದಲ್ಲಿದೆ. ಬಹುಶಃ ಈ ಮಾಹಿತಿಯು ಪೂರ್ಣಸತ್ಯವಿರಲಾರದು. ತಂಬಾಕಿಗೆ ಹಾವಿನ ವಿಷವನ್ನು ಗುಣ ಪಡಿಸುವ ಸಾಮರ್ಥ್ಯವಿಲ್ಲ. ಇದು ನಮಗೆ ಸ್ಪಷ್ಟವಾಗಿ ತಿಳಿದಿರುವಂಥ ವಿಷಯ. ಬಹುಶಃ ಆ ಸೈನಿಕನನ್ನು ಕಚ್ಚಿದ ಹಾವು ವಿಷದ ಹಾವು ಅಲ್ಲದಿರಬಹುದು ಅಥವಾ ವಿಷದ ಹಾವೇ ಕಚ್ಚಿದ್ದರೂ, ಸಾಕಷ್ಟು ವಿಷವು ದೇಹದ ಒಳಗೆ ಸೇರದಿರಬಹುದು. ಇಂಥ ಸಂದರ್ಭವನ್ನು ಡ್ರೈ ಬೈಟ್ ಎಂದು ಕರೆಯುತ್ತಾರೆ.

ಶೇ.4/9/18ರಷ್ಟು ಸಾಮರ್ಥ್ಯದ ತಂಬಾಕನ್ನು ಉತ್ತಮ ಕೀಟನಾಶಕವನ್ನಾಗಿ ಬಳಸಬಹುದು. ಹಾಗಾಗಿ ಅಭಿಚಾರಿ ವೈದ್ಯರ ವೈದ್ಯಕೀಯ ಉಪಯೋಗಗಳಲ್ಲಿ ಕೆಲವಾದರೂ ನಿಜವಾಗಿದ್ದಿರಬಹುದು. ಕೊಲಂಬಸ್ ಹಾಗೂ ಅವನ ಜತೆಯ ನಾವಿಕರು ಇಂಕಾ ಸಾಮ್ರಾಜ್ಯಕ್ಕೆ ಬಂದಾಗ, ತಂಬಾಕಿನ ಬಗ್ಗೆ ಮಾರು ಹೋದರು. ಅದನ್ನು ಯುರೋಪಿಗೆ ಕೊಂಡೊಯ್ದು ಬೆಳೆದರು.

ತಂಬಾಕಿನ ಹೊಗೆಯು ತಲೆನೋವು, ಅಸ್ತಮ, ಪ್ಲೇಗ್, ವಿಷಣ್ಣತೆ (ಮೆಲಾಂಕಲಿ) ಮುಂತಾದವನ್ನು ಗುಣಪಡಿಸುತ್ತದೆ ಎಂದು ವೈದ್ಯರು ಭಾವಿಸಿದ್ದರು. ಆದರೆ ತಂಬಾಕು ಒಂದು ಔಷಧವಲ್ಲ, ಅದೊಂದು ಮಾರಿ ಎನ್ನುವುದು ಈಗ ತಿಳಿದಿದೆ. ಆದರೂ ಜಗತ್ತಿನ ಶೇ.22ರಷ್ಟು (1.3 ಬಿಲಿಯನ್) ಜನರು ತಂಬಾಕಿಗೆ ದಾಸರಾಗಿದ್ದಾರೆ. ಶೇ.17-25ರಷ್ಟು ಮಂದಿ ಧೂಮಪಾನವನ್ನು ಮಾಡುತ್ತಿದ್ದಾರೆ. ಶೇ.36.7ರಷ್ಟು ಪುರುಷರು ಹಾಗೂ ಶೇ.7.8ರಷ್ಟು ಮಹಿಳೆಯರೂ ಧೂಮಪಾನವನ್ನು ಮಾಡುತ್ತಿದ್ದಾರೆ.

ರಕ್ತದ ಏರೊತ್ತಡ, ಹೃದಯದ ಸಮಸ್ಯೆಗಳು ಹಾಗೂ ಕಾನ್ಸರ್ ಮುಂತಾದ ಕಾಯಿಲೆಗಳು ದಿನೇ ದಿನೆ ಹೆಚ್ಚುತ್ತಿವೆ. ತಂಬಾಕು ಅನಾರೋಗ್ಯಕಾರಿ ಎಂದು ತಿಳಿದಿದ್ದರೂ, ಅದನ್ನು ಪ್ರಜ್ಞಾಪೂರ್ವಕವಾಗಿ ಬಳಸುತ್ತಿರುವ ಮನುಷ್ಯನ ವರ್ತನೆಯನ್ನು ಏನೆಂದು ಕರೆಯೋಣ?

**- ಡಾ.ನಾ.** ಸೋಮೇಶ್ವರ

ಗ್ರಹಣವು ಬಿಟ್ಟ ಕೂಡಲೇ, ಅವರು ತಂಬಾಕಿನ ಪ್ರಭಾವದಲ್ಲಿ, ತಾವೆಲ್ಲರೂ ಸೇರಿ ಹೇಗೆ ಸೂರ್ಯ-ಚಂದ್ರರನ್ನು ಮುಕ್ತಗೊಳಿಸಿದೆವೆಂದು ಹೇಳುತ್ತಾ, ಈ ಗ್ರಹಣಗಳ ಭವಿಷ್ಯವನ್ನು ನುಡಿಯುತ್ತಿದ್ದರು. ತಂಬಾಕಿನ ಪ್ರಭಾವದಲ್ಲಿ ಅವರು ನುಡಿಯುತ್ತಿದ್ದ ಭವಿಷ್ಯವು ನಿಜವೇ ಆಗುತ್ತದೆ ಎಂದು ಎಲ್ಲರೂ ನಂಬಿದ್ದರು.

### ಕದನ ನಡೆಯುತ್ತಿದೆ....

- ಚಂದ್ರ ಗ್ರಹಣವಾದಾಗ ಬಾನಿನಲ್ಲಿ ಒಂದು ಕದನವು ನಡೆಯುತ್ತಿದೆ ಎಂಬುದು ಅವರ ಗ್ರಹಿಕೆ.
- ಚಂದ್ರಗ್ರಹಣದ ಸಂದರ್ಭದಲ್ಲಿ ರ್‍ಯಾಲೆ ಪರಿಣಾಮದ (ಬೆಳಕಿನ ಏಳು ಬಣ್ಣದಲ್ಲಿ ಕೆಂಪು ಬಣ್ಣ ಮಾತ್ರ ಚೆದುರುತ್ತದೆ) ಕಾರಣ ಚಂದ್ರನು ಕೆಂಪು ಬಣ್ಣವನ್ನು ತಳೆಯುತ್ತಾನೆ.
- ಇಂದಿನ ದಿನಗಳಲ್ಲಿ ನಾವು ಇದನ್ನು ಬ್ಲಡ್ ಮೂನ್ ಎಂದು ಕರೆಯುತ್ತೇವೆ.
- ಹಾಗಿರುವಾಗ ಇಂಕಾ ಜನರು ಕೆಂಪಾಗಿರುವ ಚಂದ್ರನನ್ನು ನೋಡಿ, ಅದು ಮಾಮಾಕ್ವಿಲ್ಲ ಹಾಗೂ ಮಹಾಸರ್ಪದ ನಡುವೆ ನಡೆಯುವ ಹೋರಾಟ ಎಂದೇ ಭಾವಿಸಿದ್ದರು.
- ಈ ಹೋರಾಟದಲ್ಲಿ ತುಂಬಾ ರಕ್ತವು ಹರಿಯುತ್ತಿದ್ದ ಕಾರಣ, ಮಾಮಾಕ್ವಿಲ್ಲ ರಕ್ತದಲ್ಲಿ ಮುಳುಗಿದ್ದಾಳೆ ಎಂದು ಎಲ್ಲರೂ ದುಃಖ ಪಡುತ್ತಿದ್ದರು.


## 13-9-2025 ದಿನ ಭವಿಷ್ಯ




**ಮೇಷ:** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಪ್ರಮುಖ ಜನರು ವಿಶೇಷ ವರ್ಗ ಹೊಂದಿರುವ ಯಾವುದಕ್ಕಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ. ಯುವಕರನ್ನು ಹೊಂದಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಸಮಯ. ಸಂತೋಷಕ್ಕಾಗಿ ಹೊಸ ಸಂಬಂಧವನ್ನು ಎದುರುನೋಡಬಹುದು.




**ವೃಷಭ:** ಸಾಧ್ಯವಾದರೆ ದೀರ್ಘ ಪ್ರಯಾಣವನ್ನು ತಪ್ಪಿಸಿ. ಏಕೆಂದರೆ ನೀವು ಪ್ರಯಾಣಿಸು ತುಂಬಾ ದುರ್ಬಲರಾಗಿದ್ದೀರಿ ಹಾಗೂ ಇದು ಮತ್ತಷ್ಟು ನಿಮ್ಮನ್ನು ದುರ್ಬಲಗೊಳಿಸುತ್ತದೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು.



**ಮಿಥುನ:** ಅನಂತ ಚೈತನ್ಯ ಮತ್ತು ಉತ್ಸಾಹ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ಯಾವುದೇ ಹಳೆಯ ಸ್ನೇಹಿತ ಇಂದು ನಿಮ್ಮ ಬಳಿ ಹಣವನ್ನು ಕೇಳಬಹುದು. ನೀವು ಅವರಿಗೆ ಸಹಾಯ ಮಾಡಿದರೆ, ನಿಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು।.



**ಕರ್ಕಾಟಕ:** ಮಾತನಾಡುವ ಮುನ್ನ ಯೋಚಿಸಿ. ತಿಳಿಯದೆ ನಿಮ್ಮ ಅಭಿಪ್ರಾಯಗಳು ಬೇರೊಬ್ಬರ ಭಾವನೆಗಳಿಗೆ ಧಕ್ಕೆಯುಂಟು ಮಾಡಬಹುದು. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ. ನೀವು ಶಾಂತಿ ಕಾಪಾಡಲು ಹಾಗೂ ಕೌಟುಂಬಿಕ ಸಾಮರಸ್ಯವನ್ನು ಕಾಪಾಡಲು ನಿಮ್ಮ ಕೋಪವನ್ನು ಮೆಟ್ಟಿ ನಿಲ್ಲಬೇಕು



**ಸಿಂಹ:** ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಲು ನಿರಾಕರಿಸಿ. ಇದು ಅನಾರೋಗ್ಯದ ವಿರುದ್ಧ ಪ್ರಬಲ ಚುಚ್ಚುಮದ್ದು. ನಿಮ್ಮ ಸರಿಯಾದ ಮನೋಭಾವ ತಪ್ಪು ಮನೋಭಾವವನ್ನು ಸೋಲಿಸುತ್ತದೆ. ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಡೆಯುವ ಕಾರಣದಿಂದಾಗಿ ಇಂದು ನೀವು ನಿಮ್ಮ ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ.



ಕನ್ಯಾ: ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ. ನಿಮ್ಮ ಮಕ್ಕಳಿಗಾಗಿ ಯೋಜನೆಗಳು ಮಾಡಲು ಅತ್ಯುತ್ತಮ ದಿನ. ಸ್ವಲ್ಪ ಸಂಘರ್ಷದ ಹೊರತಾಗಿಯೂ, ನಿಮ್ಮ ಪ್ರೀತಿಯ ಜೀವನವು ಇಂದು ಉತ್ತಮವಾಗಿರುತ್ತದೆ ಮತ್ತು ನೀವು ನಿಮ್ಮ ಸಂಗಾತಿಯನ್ನು ಸಂತೋಷವಾಗಿಡಲು ಯಶಸ್ವಿಯಾಗುತ್ತೀರಿ



ತುಲಾ: ಮದ್ಯಪಾನ ಮಾಡಿದಲ್ಲಿ ಅದು ನಿಮ್ಮ ನಿದ್ರೆಗೆ ಭಂಗ ತಂದು ಆಳವಾದ ವಿಶ್ರಾಂತಿ ತೆಗೆದುಕೊಳ್ಳುವುದನ್ನು ತಡೆಗಟ್ಟಬಹುದಾದ್ದರಿಂದ ಹಾಗೆ ಮಾಡಬೇಡಿ. ನೀವು ನಿಮ್ಮ ಕೋಪವನ್ನು ನಿಯಂತ್ರಿಸಿ ಮತ್ತು ಕಚೇರಿಯಲ್ಲಿ ಎಲ್ಲರೊಂದಿಗೆ ಉತ್ತಮವಾಗಿ ವರ್ತಿಸಿ.



**ವೃಶ್ಚಿಕ:** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ ಹಾಗೂ ಅದನ್ನು ಕಟ್ಟುನಿಟ್ಟಾಗಿ ಅನುಸರಿಸಿ. ನಿಮ್ಮ ಅವಾಸ್ತವಿಕ ಯೋಜನೆ ಹಣದ ಕೊರತೆಗೆ ಕಾರಣವಾಗುತ್ತದೆ. ಹರಟೆ ನಿಮ್ಮ ಸಮಯ ವ್ಯರ್ಥ ಮಾಡುವುದಕ್ಕಿಂತ ಸುಮ್ಮನಿರುವುದು ಉತ್ತಮ.



**ಧನು:** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಪೂರ್ತಿ ದಿನ ನೀವು ಹಣದ ಬಗ್ಗೆ ಹೋರಾಟ ಮಾಡುತ್ತಿದ್ದೀರಿ, ಆದರೆ ಸಂಜೆಯ ಸಮಯದಲ್ಲಿ ನೀವು ಹಣದ ಲಾಭವನ್ನು ಪಡೆಯಬಹುದು. ಸಂಜೆ ನಿಮ್ಮ ಮಕ್ಕಳೊಂದಿಗೆ ಸ್ವಲ್ಪ ಆಹ್ಲಾದಕರ ಸಮಯ ಕಳೆಯಿರಿ. ನೀವು ಕೆಲಸದಲ್ಲಿ ಅಭಿನಂದನೆಗಳನ್ನು ಪಡೆಯಬಹುದು.



**ಮಕರ:** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಅಂಚೆಯ ಮೂಲಕ ಬರುವ ಒಂದು ಪ್ರಮುಖ ಸಂದೇಶ ಇಡೀ ಕುಟುಂಬಕ್ಕೆ ಸಂತೋಷ ತರುತ್ತದೆ.




**ಕುಂಭ:** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ಈ ರಾಶಿಚಕ್ರದ ಉದ್ಯಮಿಗಳು, ಇಂದು ನಿಮ್ಮ ಬಳಿ ಹಣವನ್ನು ಕೇಳುತ್ತಾರೆ ಮತ್ತು ನಂತರ ಮರುಪಾವತಿ ಮಾಡದೇ ಇರುವಂತಹ ನಿಮ್ಮ ಮನೆಯ ಸದಸ್ಯರಿಂದ ದೂರವಿರಬೇಕು. ಆಧ್ಯಾತ್ಮಿಕತೆಯ ಬಗ್ಗೆ ಬಲವಾದ ಭಾವನೆ ಇರುವ ಸಾಧ್ಯತೆಯಿದೆ.



**ಮೀನ:** ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ನೀವು ನಿಮ್ಮ ಕೋಪವನ್ನು ನಿಯಂತ್ರಿಸಿ ಮತ್ತು ಕಚೇರಿಯಲ್ಲಿ ಎಲ್ಲರೊಂದಿಗೆ ಉತ್ತಮವಾಗಿ ವರ್ತಿಸಿ., ಆಗೇ ನೀವು ಮಾಡದಿದ್ದರೆ ನಿಮ್ಮ ಕೆಲಸ ಹೋಗಬಹುದು. ಸಂಗಾತಿ ಮತ್ತು ಮಕ್ಕಳು ಹೆಚ್ಚುವರಿ ಪ್ರೀತಿ ಮತ್ತು ಕಾಳಜಿ ತೋರಿಸುತ್ತಾರೆ.

## ಪೆಟ್ಟು

ನಾನು ಕಾಯ್ತಾ ಇದ್ದೇನೆ ಆ ದಿನ ನಿನಗೆ ಬರಲೇಬೇಕು. ನಿನ್ನ ಸ್ವಾಭಿಮಾನ ಇದೆಯಲ್ಲ ಸ್ವಾಭಿಮಾನದ ಕಪಾಳಕ್ಕೆ ಎರಡು ಬಾರಿಸುವಂತಹ ದಿನ. ನಿನ್ನ ಕಣ್ಣ ಮುಂದೆ ಬಂದಾಗ ನೀನು ಖಂಡಿತ ಬದಲಾಗ್ತೀಯಾ ಏನಾದರೂ ಹೊಸತನ ಮಾಡಬೇಕು ಅಂತ ಅಂದುಕೊಳ್ಳುತ್ತೀಯಾ. ಯಾವತ್ತೂ ನಿನ್ನ ಸ್ವಾಭಿಮಾನಕ್ಕೆ ಏನೂ ತೊಂದರೆ ಆಗುವುದಿಲ್ಲವೋ ಅಲ್ಲಿಯವರೆಗೂ ನೀನು ಯಾವುದೇ ಹೊಸ ಹೆಜ್ಜೆಯನ್ನು ಇಡುವುದಿಲ್ಲ. ಹೊಸತನ್ನ ಪ್ರಯತ್ನ ಪಡುವುದಿಲ್ಲ. ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಾಗ ಮಾತ್ರ ವ್ಯಕ್ತಿ ಜಾಗ್ರತನಾಗುತ್ತಾನೆ. ಇದ್ದದ್ದಕ್ಕಿಂತ ಬದಲಾವಣೆ ಬೇಕು ಅಂತ ಅಂದುಕೊಳ್ಳುತ್ತಾನೆ. ಅವತ್ತೂ ಆತ ಹೊಸ ದಾರಿಯನ್ನು ಹುಡುಕುತ್ತಾನೆ. ಹಾಗಾಗಿ ನಿನ್ನ ಸ್ವಾಭಿಮಾನಕ್ಕೆ ಪೆಟ್ಟು ಬೀಳಲೇಬೇಕು. ಆ ದಿನವನ್ನು ನಾನು ಕಾಯ್ತಾ ಇದ್ದೇನೆ. ಪ್ರತಿದಿನವೂ ಭಗವಂತನಲ್ಲಿ ಅದನ್ನೇ ಬಿಡುತ್ತಿದ್ದೇನೆ ಹೀಗೆಂದ ನನ್ನ ಗೆಳೆಯನ ಮಾತು ನನಗೊಂದು ಸಲಾ ದಿಗಿಲು ಹುಟ್ಟಿಸಿತು. ಆದರೂ ಆತನ ಮಾತಿನಲ್ಲಿ ಸತ್ಯ ಇದೆ ಅನ್ನಿಸ್ತು ಭಗವಂತನಲ್ಲೂ ಅದನ್ನೇ ಕೇಳಿಕೊಂಡೆ ಆತನ ಪ್ರಾರ್ಥನೆ ಯನ್ನು ಫಲಿಸಿ ಬಿಡು ಅಂತ.



**- ಧೀರಜ್** ಬೆಳ್ಳಾರೆ

## ಗಂಟೆಯೂ ಬಡಿಯುತ್ತದೆ

ನಾವು ಭಾರತೀಯರು, ನಮ್ಮ ಭಾರತ ದೇಶವನ್ನು ಭರತ ಖಂಡವೆಂದು ಕರಿಯುತ್ತಾರೆ. ಯಾಕೆಂದರೆ ಒಂದು ಖಂಡದಲ್ಲಿ ಇರಬೇಕಾದ ಎಲ್ಲ ವೈಶಿಷ್ಟೆಗಳು ಒಂದು ದೇಶದಲ್ಲಿದೆ ಎಂದು. ಹಲವಾರು ಭಾಷೆಗಳು, ಅಸಂಖ್ಯಾತ ಆಚರಣೆಗಳು, ಮುಕ್ಕೋಟಿ ದೇವತೆಗಳು, ವಿವಿಧ ಭಕ್ಷ್ಯ ಭೋಜನಗಳು, ಕಾಡು, ನಾಡು, ಬೆಟ್ಟ, ಬಯಲು, ಮರುಭೂಮಿ, ಹಿಮದ ಹಾಸಿಗೆ ಹಾಸಿ ನಗುತ್ತ ಕಂಗೊಳಿಸುತ್ತಿರುವ ಹಿಮಾಲಯದ ಬೆಟ್ಟಗಳು, ದ್ವೀಪಗಳು, ಕಣ್ಣಾಯಿಸಿದಷ್ಟು ಮುಗಿಯದ ಸಮುದ್ರಗಳು ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇದಕ್ಕಾಗಿಯೇ ನಾವು ನಮ್ಮ ಭಾರತವನ್ನು ''ಅಖಂಡ ಭಾರತ'' ಎಂದು ಹೆಮ್ಮೆ ಇಂದ ಕರಿಯುತ್ತೀವಿ.

ಇಷ್ಟೆಲ್ಲಾ ಬಾಚಿ ಕೊಡುತ್ತಿರುವ ದೇಶಕ್ಕೆ ನಮ್ಮೆಲ್ಲರಿಂದ ಸೇವೆಯಾಗಬೇಕೇ ವಿನಃ, ಅಪಚಾರವಲ್ಲ. ನಮ್ಮಲ್ಲಿರುವ ವಿವಿಧತೆಯು ನಮ್ಮ ಶಕ್ತಿಯಾಗಬೇಕೇ ವಿನಃ, ನಮ್ಮನ್ನು ದೂರಗೊಳಿಸುವ ಅಸ್ತ್ರವಾಗಬಾರದು. ದೇಶಕ್ಕಿಂತ ಯಾವ ಜಾತಿಯು ದೊಡ್ಡದಲ್ಲ, ಯಾವ ವಿಭಿನ್ನತೆಯು ದೊಡ್ಡದಲ್ಲ. ನಮ್ಮ ವಿಭಿನ್ನತೆಗಳಿಗಾಗಿ ನಾವು ಆಂತರಿಕವಾಗಿ ಕಚ್ಚಾಡಿಕೊಂಡರೆ, ನಮ್ಮನು ಹಾಳು ಮಾಡಬೇಕೆಂದು ಹೊಂಚಿಹಾಕುತ್ತಿರುವವರಿಗೆ ನಾವೇ ಆಹ್ವಾನ ಕೊಡುವಂತಾಗುತ್ತದೆ.

ಭಾರತವು ಜಾತ್ಯತೀತತೆಯನ್ನು ಅನುಸರಿಸುತ್ತದೆ. ಹಾಗೆಂದರೆ ಭಾರತದಲ್ಲಿ ಹಲವಾರು ಧರ್ಮಗಳನ್ನು ಆಚರಿಸುವ ಹಕ್ಕಿರುತ್ತದೆ. ಭಾರತ ಯಾವ ಧರ್ಮದ ಪರ,ವಿರೋಧ ಅಲ್ಲ. ಎಲ್ಲ ಭಾರತೀಯ ಪ್ರಜೆಗೂ ತನ್ನ ಧರ್ಮವನ್ನು ಪಾಲಿಸುವ ಹಾಗು ಆಚರಿಸುವ ಹಕ್ಕಿರುತ್ತದೆ. ಹೀಗಿರುವಾಗ ಯಾವುದೊ ಒಂದು ಧರ್ಮದ ಪರವಾಗಿ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ ಅಥವಾ ಒಂದು ಧರ್ಮವನ್ನು ಓಲೈಸುತ್ತಿದೆ ಎಂದರೆ ಅದು ನಮ್ಮ ದೇಶದ ಮೂಲ ಭೂತ ಹಕ್ಕುಗಳನ್ನು ದಿಕ್ಕರಿಸುತ್ತಿದೆ ಎಂದು. ಮೊನ್ನೆಯಷ್ಟೇ ನಡೆದ ಗಣೇಶ ವಿಸರ್ಜನೆ ಸಂಭ್ರಮದಲ್ಲಿ, ಹಿಂದೂ ಧರ್ಮದ ಆಚರಣೆಗಳನ್ನು ಮತ್ತೊಂದು ಧರ್ಮದ ಜನರು ಕಲ್ಲು ತೂರಾಟದಿಂದ ಭಂಗ ಪಡಿಸಿದ್ದಾರೆ, ಆದರೂ ನಮ್ಮ ಸರ್ಕಾರ ಕಣ್ಣು ಮುಚ್ಚಿ ಕೂತಿದೆ. ಮತ್ತೆ ನಾವುಗಳು ನಮ್ಮ ಮೇಲೆ ಕಲ್ಲು ತೂರಾಟವಾಗಿಲ್ಲವೆಂದು ಸುಮ್ಮನಿದ್ದೀವಿ. ನಾವು ಹೇಳುವುದಕ್ಕಷ್ಟೇ ಸನಾತನ ಧರ್ಮದವರು, ಆದರೆ ನಾವು ಗುರುತಿಸಿಕೊಳ್ಳುವುದು ನಮ್ಮ ಜಾತಿಯಿಂದ, ಇಲ್ಲವೆ ಉತ್ತರ ಭಾರತದವರು ದಕ್ಷಿಣ ಭಾರತದವರು ಎಂದು. ಇಷ್ಟೇ ವಿಭಜನೆ ಎಂದುಕೊಳ್ಳಬೇಡಿ ಅದರಲ್ಲಿ ಸಾವಿರಾರು ವಿಭಜನೆಗಳು, ಇಷ್ಟು ವಿಭಜನೆಗಳನ್ನು ದಾಟಿ ಬಂದು ನಾವು ಪ್ರಶ್ನಿಸಲು ಸಾಧ್ಯವೇ? ಎಂದಿಗೂ ಅಸಾಧ್ಯ.

ಇದು ನಮ್ಮ ರಾಜ್ಯದ ಸ್ಥಿತಿಯಾದರೆ, ನಮ್ಮ ದೇಶದಲ್ಲಿ ಅಶೋಕ ಲಾಂಛನವನ್ನು ನಮ್ಮ ಗುರುತು, ನಮ್ಮ ಗೌರವವೆಂದು ಪರಿಗಣಿಸುತ್ತೇವೆ. ಅಂತಹ ಲಾಂಛನವನ್ನೇ ಬಹಿರಂಗವಾಗಿ ಹೊಡೆದು ಅಪಮಾನ ಮಾಡಿದರು, ಕೇಳುವವರಿಲ್ಲ ಹೇಳುವವರಿಲ್ಲ. ನಮ್ಮ ಮನೆಗೆ ಬೆಂಕಿ ಹಚ್ಚಿಲವಲ್ಲ? ನಮ್ಮ ಗೌರವಕ್ಕೆ ಧಕ್ಕೆಯಾಗಿಲ್ಲವಲ್ಲ ಮತ್ತೇಕೆ ಬಾಯಿ ಬಿಚ್ಚುತ್ತೀವಿ? ನಾವು ಕೇವಲ ಕ್ಷುಲ್ಲಕ ವಿಷಯಗಳಿಗಷ್ಟೇ ಬಾಯಿ ತೆರೆಯುವುದು. ಗಂಟೆಯೂ ಬಡಿಯುತ್ತಿದೆ, ನಮ್ಮ ಮನೆಗೆ ಈಗ ಬೆಂಕಿ ಹಚ್ಚದಿರಬಹುದು ಆದರೆ ನಡೆಯುತ್ತಿರುವ ಘಟನೆಗಳು ಮುಂಬರುವ ಕಾಡ್ಗಿಚ್ಚನ್ನು ಸೂಚಿಸುತ್ತಿದೆ. ಈಗ ನಮ್ಮ ಭಾರತ ತಾಯಿಯನ್ನು ಅಗೌರವದಿಂದ ನೋಡುತ್ತಿರಬಹುದು, ಸುಮ್ಮನಿದ್ದರೆ ನಾಳೆ ನಮ್ಮನ್ನು ಅವರ ಅಡಿಯಾಳಾಗಿ ನೋಡುವುದು ಕಟ್ಟಿಟ್ಟ ಬುತ್ತಿ. ನಮ್ಮ ವಿವಿಧತೆಗಳನ್ನು ನಮ್ಮ ಗೋಡೆಯನ್ನಾಗಿಸದೆ, ನಮ್ಮ ಮುಂದೆ ಇರುವ ಸವಾಲುಗಳನ್ನು ಎದರಿಸುವ ಶ್ರೀಚಕ್ರವಾಗಿಸಬೇಕಿದೆ. ಇಲ್ಲವೇ ಮತ್ತೆ ಈ ಅಖಂಡ ಭಾರತವನ್ನು ಬೇರೊಬ್ಬರಿಗೆ ಒಪ್ಪಿಸಿ ನಾವು ಗುಲಾಮರಾಗಿ ಬದುಕುವುದರಲ್ಲಿ ಸಂದೇಹವೇ ಇಲ್ಲ. ಗಂಟೆಯೂ ಬಡಿಯುತ್ತಿದೆ, ನಮ್ಮ ದೇಶಕ್ಕಾಗಿ ನಾವು ಪ್ರಶ್ನಿಶಬೇಕಿದೆ, ಸರ್ಕಾರಗಳನ್ನು ಉರುಳಿಸಬೇಕಿದೆ, ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕಿದೆ, ನಾವೆಲ್ಲರೂ ಭಾರತೀಯರಾಗಿ ಹೋರಾಡಬೇಕಿದೆ. ನಾವೆಲ್ಲರೂ ಭಾರತೀಯರಾಗಿ ಬದುಕಬೇಕಿದೆ.



**- ಅರೋರಾ**

# ಮದ್ದೂರಿನ ಗಣೇಶ - ಮಸೀದಿ - ಕಲ್ಲು ತೂರಾಟ ಮತ್ತು ಜನಸಾಮಾನ್ಯ

ವಿಭಜನೆಯ ಬೀಜಗಳು ಮೊಳಕೆ ಒಡೆಯದಂತೆ ತಡೆಯುವ ಜವಾಬ್ದಾರಿ ನಮ್ಮೆಲ್ಲರದು. ನಾವೆಲ್ಲ ಇದೊಂದು ರಾಜಕೀಯ ಷಡ್ಯಂತ್ರ, ಕುತಂತ್ರ ಎಂದು ಸುಮ್ಮನೆ ಮಾತನಾಡಿಕೊಳ್ಳುತ್ತಾ, ಯಾವುದೇ ಪ್ರತಿಕ್ರಿಯೆ ನೀಡದೆ ನಮ್ಮ ಪಾಡಿಗೆ ನಾವಿದ್ದರೆ ಖಂಡಿತವಾಗಲೂ ಮುಂದಿನ ದಿನಗಳು ನಮ್ಮ ಬುಡಕ್ಕೆ ಈ ಸಮಸ್ಯೆ ಬರಬಹುದು. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ಗಣೇಶೋತ್ಸವದ ಗಲಭೆಗಳು ಸಾಮಾನ್ಯವಾಗುತ್ತಿದೆ. ಅದರ ಅರ್ಥ ಮನಸ್ಸುಗಳು ಧರ್ಮದ ಆಧಾರದ ಮೇಲೆ ಒಡೆದು ಹೋಗುತ್ತಿದೆ. ಇದಕ್ಕೆ ಆ ಕ್ಷಣದ ಆ ಘಟನೆಯಾ ಮೇಲೆ ಚರ್ಚೆ ಮಾಡಿಕೊಂಡು ಒಂದು ನಿರ್ಧಾರಕ್ಕೆ ಬರುವುದು ತೀರ ಬಾಲಿಶವಾದದ್ದು. ವ್ಯವಸ್ಥೆ ಮತ್ತು ಅದು ಸಾಗುತ್ತಿರುವ ದಿಕ್ಕನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಬೇಕಿದೆ.

ನಮ್ಮನ್ನು ಕಾಪಾಡಬೇಕಾಗಿದ್ದ ದೇವರು, ನಮ್ಮನ್ನು ರಕ್ಷಿಸಿ ಕ್ರಮಬದ್ಧ ಜೀವನಶೈಲಿ ರೂಪಿಸಬೇಕಾಗಿದ್ದ ಧರ್ಮಗಳು ಇಂದು ನಮ್ಮನ್ನು ವಿಭಜಿಸಿರುವುದು ಮಾತ್ರವಲ್ಲದೆ ದೇವರು ಧರ್ಮವನ್ನು ಉಳಿಸಬೇಕಾದ ಪರಿಸ್ಥಿತಿ ಶ್ರೀ ಸಾಮಾನ್ಯನಿಗೆ ಹೊರಿಸಿ ಸಮಾಜದ ಆರ್ಥಿಕ ಮತ್ತು ಸಾಮಾಜಿಕ ಮೇಲ್ವರ್ಗದವರು ತಾವು ಸುಖವಾಗಿದ್ದಾರೆ. ಇದು ವಿಚಿತ್ರವಲ್ಲವೇ. ಬೇಕಾದರೆ ಗಮನಿಸಿ.

ಸ್ವಲ್ಪ ಖಾರವಾದರೂ ವಾಸ್ತವ ಇದೇ ಅಲ್ಲವೇ? ಒಂದು ಕಡೆ ಮದ್ದೂರಿನ ತರಕಾರಿ ಕಮಲಮ್ಮನ ಮಗ, ಗಣೇಶ ಉತ್ಸವದಲ್ಲಿ ಭಾಗವಹಿಸಿ, ಅಂದು ನಡೆದ ಗಲಭೆಯಲ್ಲಿ ಆರೋಪಿಯಾಗಿ ಪೊಲೀಸರು ಬಂಧಿಸಿದ್ದರಿಂದ ಇಂದು ಜೈಲಿನಲ್ಲಿದ್ದಾನೆ. ಆತನ ಜಾಮೀನಿಗಾಗಿ ಕಮಲಮ್ಮನವರು ತುಂಬಾ ನೋವಿನಿಂದ, ಕಷ್ಟದಿಂದ ಪ್ರಯತ್ನಿಸುತ್ತಿದ್ದಾರೆ. ಮಾಧ್ಯಮಗಳ ಮುಂದೆ ಗೋಳಾಡುತ್ತಿದ್ದಾರೆ.

ಮತ್ತೊಂದು ಕಡೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮಗ ಡಾಕ್ಟರ್ ಯತೀಂದ್ರ ಸಿದ್ದರಾಮಯ್ಯನವರು ಈಗ ಎಂ ಎಲ್ ಸಿ ಯಾಗಿ ಮುಂದೆ ತನ್ನ ತಂದೆಯ ನಂತರ ರಾಜ್ಯದಲ್ಲಿ ಮಂತ್ರಿಯಾಗಲು ಸಾಕಷ್ಟು ಪ್ರಯತ್ನ ಪಡುತ್ತಿದ್ದಾರೆ. ಒಂದು ಕಡೆ ಭದ್ರಾವತಿಯ ಹಣ್ಣಿನ ಅಂಗಡಿಯ ಇಬ್ರಾಹಿಂ ಅವರ ಮಗ ನಿನ್ನೆ ನಡೆದ ಗಣೇಶ ಉತ್ಸವದ ಗಲಾಟೆಯ ಸಂದರ್ಭದಲ್ಲಿ ಭಾಗಿಯಾಗಿದ್ದ ಆರೋಪದಲ್ಲಿ ಈಗ ಜೈಲು ಸೇರಿದ್ದಾನೆ. ಅವನ ಬಿಡುಗಡೆಗಾಗಿ ಅವರ ತಂದೆ ಇಬ್ರಾಹಿಂ ಕಣ್ಣೀರು ಸುರಿಸುತ್ತಾ ಓಡಾಡುತ್ತಿದ್ದಾರೆ.

ಮತ್ತೊಂದು ಕಡೆ ಕರ್ನಾಟಕ ಸರ್ಕಾರದ ಮಂತ್ರಿಗಳು ಹಾಗೂ ಮುಸ್ಲಿಂ ಸಮುದಾಯದ ನಾಯಕರು ಆದ ಜಮೀರ್ ಅಹ್ಮದ್ ಅವರ ಪುತ್ರ ಹಿಂದೆ ಒಂದು ಸಿನಿಮಾದಲ್ಲಿ ಅಭಿನಯ ಮಾಡಿ ಈಗ ನಾಯಕನಾಗಿ ಮತ್ತೊಂದು ದೊಡ್ಡ ಬಜೆಟ್ಟಿನ ಸಿನಿಮಾ ಮಾಡಲು ಸಿದ್ದತೆಯಲ್ಲಿ ತೊಡಗಿ ಅದಕ್ಕಾಗಿ ತುಂಬಾ ಶ್ರಮವಹಿಸುತ್ತಿದ್ದಾರೆ.

ಒಂದು ಕಡೆ ಶಿವಮೊಗ್ಗಾದ ರೈತರಾದ ಕೃಷ್ಣಪ್ಪರನವರ ಮಗ ಅದೇ ಗಣೇಶನ ಮೆರವಣಿಗೆಯಲ್ಲಿ ಭಾಗವಹಿಸಿ ಆರೋಪಿಯಾಗಿ ಜೈಲು ಸೇರಿದ್ದಾನೆ. ಕೃಷ್ಣಪ್ಪನವರು ಅದೇ ಕೊರಗಿನಲ್ಲಿ ಹಾಸಿಗೆ ಹಿಡಿದಿದ್ದಾರೆ. ಅವರ ಬಂಧುಗಳು ನ್ಯಾಯಾಲಯಕ್ಕೆ ಅಲೆದಾಡುತ್ತಿದ್ದಾರೆ. ಮತ್ತೊಂದು ಕಡೆ ಮಾಜಿ ಮುಖ್ಯಮಂತ್ರಿಗಳು ಮತ್ತು ಹಾಲಿ ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿಯವರ ಮಗ ನಿಖಿಲ್ ಕುಮಾರಸ್ವಾಮಿ ಅವರು ಮುಂದೆ ತಮ್ಮ ಪಕ್ಷವನ್ನು ರಾಜ್ಯಾದ್ಯಂತ ಬೆಳೆಸುವ ನಿಟ್ಟಿನಲ್ಲಿ ಅದರ ಅಧ್ಯಕ್ಷರಾಗಲು ಸಾಕಷ್ಟು ಶ್ರಮ ಪಡುತ್ತಿದ್ದಾರೆ.

ಒಂದು ಕಡೆ ದಾವಣಗೆರೆಯ ಬಟ್ಟೆ ಅಂಗಡಿ ಖಲೀಲ್ ಸಾಬರ ಮಗ ಮತ್ತೆ ಅದೇ ಗಣೇಶೋತ್ಸವದ ಗಲಾಟೆಯ ಆರೋಪದಲ್ಲಿ ಜೈಲು ಪಾಲಾಗಿದ್ದಾನೆ. ಖಲೀಲ್ ಸಾಬರು ಇದ್ದ ಒಂದಷ್ಟು ಹಣ ಕೂಡಿಸಿ ಸಾಲ ಮಾಡಿ ಮಗನನ್ನು ಬಿಡಿಸಿಕೊಳ್ಳಲು ವಕೀಲರ ಮನೆ ಬಾಗಿಲು ಸುತ್ತುತ್ತಿದ್ದಾರೆ. ಮತ್ತೊಂದು ಕಡೆ ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರ ಮಗ ವಿಜಯೇಂದ್ರ ಅವರು ರಾಜ್ಯ ಬಿಜೆಪಿ ಅಧ್ಯಕ್ಷರಾಗಿ, ಮುಂದೆ ಪಕ್ಷವನ್ನು ಅಧಿಕಾರಕ್ಕೆ ತಂದು ತಾವೇ ಮುಖ್ಯಮಂತ್ರಿ ಆಗಬೇಕೆಂಬ ಆಸೆಯಿಂದ ಸಾಕಷ್ಟು ಶ್ರಮ ಪಡುತ್ತಿದ್ದಾರೆ. ಒಂದು ಕಡೆ ನಾಗಮಂಗಲದ ಎಂಬಿಎ ಓದಿದ್ದ ಕೆಂಚೇಗೌಡರ ಮಗ ಈ ಗಲಭೆಯಲ್ಲಿ ಆರೋಪಿಯಾಗಿ ಜೈಲಿಗೆ ಸೇರಿದ್ದಾನೆ. ಅವನನ್ನು ವಿದೇಶದಲ್ಲಿ ಓದಿಸಬೇಕೆಂದು ಕನಸುಕಂಡಿದ್ದ ಕೆಂಚೇಗೌಡರು ಅವನ ಮುಂದಿನ ಭವಿಷ್ಯ, ಪಾಸ್ ಪೋರ್ಟ್, ವೀಸಾಗೆ ಈ ಬಂಧನ ಎಷ್ಟರಮಟ್ಟಿಗೆ ತೊಂದರೆ ಕೊಡಬಹುದು ಎಂಬ ಚಿಂತೆಯಲ್ಲಿ ಕೊರಗುತ್ತಿದ್ದಾರೆ.

ಮತ್ತೊಂದು ಕಡೆ ಕರ್ನಾಟಕದ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಮಗಳು ಒಂದು ಬೃಹತ್ ಉದ್ದಿಮೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಾ, ಅದನ್ನು ಇನ್ನೂ ದೇಶ ವಿದೇಶಗಳಲ್ಲಿ ಬೆಳೆಸಲು ಸಾಕಷ್ಟು ಶ್ರಮ ಪಡುತ್ತಿದ್ದಾರೆ. ಈ ಎಲ್ಲಾ ಹೆಸರುಗಳು ಕೇವಲ ಸಾಂಕೇತಿಕ. ನಿಮ್ಮ ಮನಸ್ಸಿನಲ್ಲಿ ಸುಳಿದಾಡುವ ಯಾವುದೇ ರಾಜಕಾರಣಿ ಅಥವಾ ಪತ್ರಕರ್ತರು ಅಥವಾ ಧಾರ್ಮಿಕ ಮುಖಂಡರು ಅಥವಾ ದೊಡ್ಡ ಹುದ್ದೆಯ ಅಧಿಕಾರಿಗಳು ಅಥವಾ ಸಿನಿಮಾ ನಟರು ಅಥವಾ ವಿಜ್ಞಾನಿಗಳು ಅಥವಾ ಸಾಹಿತಿಗಳು ಅಥವಾ ಯಾರೇ ಆಗಿರಲಿ ದೊಡ್ಡವರ ಮಕ್ಕಳು ಎಂದಿಗೂ ಕಲ್ಲು ಎಸೆಯುವುದಿಲ್ಲ. ಮಚ್ಚು ಹಿಡಿದು ಹೊಡೆದಾಡುವುದಿಲ್ಲ. ಈ ರೀತಿಯ ಉತ್ಸವಗಳ ಗಲಭೆಗಳಲ್ಲಿ ಭಾಗವಹಿಸುವುದಿಲ್ಲ. ಆದರೆ ಬಡವರು, ಮಧ್ಯಮ ವರ್ಗದವರು ಹುಚ್ಚು ಹಿಡಿದವರಂತೆ, ಅಜ್ಞಾನದಿಂದ, ತಮ್ಮ ಧರ್ಮಗಳ, ದೇವರುಗಳ ರಕ್ಷಣೆ ಮಾಡುತ್ತೇವೆ ಎನ್ನುವ ಭ್ರಮೆಗೆ ಒಳಗಾಗಿ ಜೈಲು ಪಾಲಾಗುತ್ತಿರುವುದು ನಮ್ಮ ಕಣ್ಣ ಮುಂದೆ ನಡೆಯುತ್ತಿದೆ.



ಅಷ್ಟು ದೊಡ್ಡ ದೊಡ್ಡ ಮಾತನಾಡುವ ಎರಡೂ ಕಡೆಯ ಧರ್ಮ ರಕ್ಷಕರು ತಮ್ಮ ಮಕ್ಕಳನ್ನು ಹೊಡೆದಾಟಗಳಿಗೆ ಕಳುಹಿಸಲಿ ನೋಡೋಣ. ಅನೇಕ ಮೇಲ್ವರ್ಗದ ಜನ ತಮ್ಮ ಮಕ್ಕಳನ್ನು ವಿದೇಶಗಳಲ್ಲಿ ಓದಿಸಿ ಅಲ್ಲಿಯೇ ವಾಸಿಸುವಂತೆ ಮಾಡಿ ಈಗ ಇಲ್ಲಿ ಧರ್ಮ ರಕ್ಷಣೆಗೆ ಬಡ ಮತ್ತು ಮಧ್ಯಮ ವರ್ಗದ ಜನರನ್ನ ಉಪಯೋಗಿಸಿಕೊಂಡು ರೊಚ್ಚಿಗೆಬ್ಬಿಸಿ ಅವರನ್ನು ಜೈಲು ಪಾಲು ಮಾಡುತ್ತಿದ್ದಾರೆ.

ಈಗ ಯೋಚಿಸುವ ಸರದಿ ನಮ್ಮದು. ಇದೆಲ್ಲವೂ ಬೇಕೆ. ಒಮ್ಮೆ ಆರೋಪಿಯಾಗಿ ಕೋರ್ಟ್ ಕಟಕಟೆ ಹತ್ತಿ ಅಲ್ಲಿಂದ ಜೈಲು ಸೇರಿದ ಮೇಲೆ ನಮ್ಮ ಜೀವನದಲ್ಲಿ ಆ ದಾಖಲೆ ಶಾಶ್ವತವಾಗಿ ಉಳಿದುಬಿಡುತ್ತದೆ. ಯಾವುದೇ ಪಾಸ್ ಪೋರ್ಟ್, ವೀಸಾ ಅಥವಾ ಸರ್ಕಾರಿ ನೌಕರಿ ಪಡೆಯಬೇಕೆಂದಾಗ ಈ ಒಂದು ವಿಷಯ ಸದಾ ಅಡ್ಡಿಪಡಿಸುತ್ತದೆ. ಆಗ ಯಾವ ದೇವರು, ಧರ್ಮವು, ರಾಜಕೀಯ ನಾಯಕರು, ಧಾರ್ಮಿಕ ನಾಯಕರು ನಮ್ಮ ರಕ್ಷಣೆಗೆ ಬರುವುದಿಲ್ಲ. ಇದನ್ನು ಗಂಭೀರವಾಗಿ ಯೋಚಿಸಿ.

ಧರ್ಮ ರಕ್ಷಣೆ ಮಾಡಲು, ಹೊಡೆದಾಡಲು ಸಿ ಟಿ ರವಿ, ಸಂತೋಷ್ ಲಾಡ್, ಆರ್. ಅಶೋಕ್, ಪ್ರತಾಪ್ ಸಿಂಹ, ದಿನೇಶ್ ಗುಂಡೂರಾವ್ ಮುಂತಾದ ಯಾರು ಬರುವುದಿಲ್ಲ. ಈಶ್ವರ್ ಕಂಡ್ರೆ ಅವರ ಮಗ, ಸತೀಶ್ ಜಾರಕಿಹೊಳಿ ಅವರ ಮಗಳು, ಮೈಸೂರಿನ ಮಹಾರಾಜ, ಯಡಿಯೂರಪ್ಪನವರ ಇನ್ನೊಬ್ಬ ಮಗ, ಕುಮಾರಸ್ವಾಮಿಯವರ ಪತ್ನಿ ಇಂತಹವರೇ ಎಂಎಲ್‌ಎ ಎಂಪಿಗಳಾಗುತ್ತಾರೆ. ಇವರು ಬಂದು ಹೊಡೆದಾಡಲಿ ನೋಡೋಣ.

ದಯವಿಟ್ಟು ಮತ್ತೆ ಮತ್ತೆ ಅರ್ಥ ಮಾಡಿಕೊಳ್ಳಿ. ರಾಜಕಾರಣಿಗಳೇ ಗಲಭೆ ಮಾಡಿಕೊಳ್ಳಲಿ. ನಾವು ನಮ್ಮ ನಮ್ಮ ಹಂತದಲ್ಲಿ ಪ್ರೀತಿ, ಸೌಹಾರ್ದತೆ, ಸಮನ್ವಯ ಮಾಡಿಕೊಂಡು ಬಾಂಧವ್ಯ ಬೆಸೆದು ನೆಮ್ಮದಿಯಾಗಿರೋಣ. ಪ್ರತಿ ಗಣೇಶ ಹಬ್ಬದಲ್ಲೋ ಅಥವಾ ಈದ್ ಮಿಲಾದ್, ರಂಜಾನ್ ಬಕ್ರೀದ್ ಸಂದರ್ಭದಲ್ಲಿ ಈ ರೀತಿ ಒಬ್ಬರಿಗೊಬ್ಬರು ಹೊಡೆದಾಟ ಮಾಡಿಕೊಂಡು ಬಡವರೇ ಜೈಲು ಪಾಲಾಗುವ ಈ ವ್ಯವಸ್ಥೆಯನ್ನು ಇನ್ನು ಮುಂದಾದರು ತಡೆಯೋಣ. ಅಧಿಕಾರ ಅನುಭವಿಸುವವರು, ಧರ್ಮದ, ಜಾತಿಯ ಹೆಸರೇಳಿ ಉನ್ನತ ಸ್ಥಾನ ಪಡೆಯುವವರು ಬೇಕಾದರೆ ಹೊಡೆದಾಡಿಕೊಳ್ಳಲಿ. ನಮಗ್ಯಾಕೆ ಆ ಚಿಂತೆ.

ಕೇವಲ ಬಡವರ ಮಕ್ಕಳು ಮಾತ್ರ ಗಣೇಶೋತ್ಸವದಲ್ಲಿ ಡೊಳ್ಳು ಡೋಲು ತಮಟೆ ಹೊಡೆಯುತ್ತಾ, ಡಿಜೆ ಶಬ್ದಕ್ಕೆ ಕುಣಿಯುತ್ತಾ, ತಾವೇ ಧರ್ಮರಕ್ಷಕರಂತೆ ಆಡುತ್ತಾರೆ. ಯಾವುದೇ ಹಿರಿಯ ಅಧಿಕಾರಿಗಳ, ರಾಜಕಾರಣಿಗಳ, ಉದ್ಯಮಿಗಳ ಮಕ್ಕಳು ಅಲ್ಲಿಗೆ ಬರುವುದೇ ಇಲ್ಲ. ಇದನ್ನು ಸಹ ಗಂಭೀರವಾಗಿ ಯೋಚಿಸಿ. ದೇಶಕ್ಕೆ ಸ್ವಾತಂತ್ರ್ಯ ಸಿಗಲು, ಜನ ಒಗ್ಗೂಡಲು ತನ್ನದೇ ಕೊಡುಗೆ ನೀಡಿದ ಈ ಉತ್ಸವಗಳು ದೇಶದ ವಿಭಜನೆಗೆ ಕಾರಣವಾಗದಿರಲಿ ಎಂದು ಎಚ್ಚರಿಸುತ್ತಾ...

**- ವಿವೇಕಾನಂದ. ಎಚ್. ಕೆ.,** ಬೆಂಗಳೂರು

# ಶಿಕ್ಷಕರ ವರ್ಗಾವಣೆ: ವಿದ್ಯಾರ್ಥಿ-ಪೋಷಕರಿಂದ ಪ್ರತಿಭಟನೆ

• ಪ್ರಜೋದಯ ವರದಿ




**ಬೇಲೂರು:** ಶಾಲೆಯ ಸಮಗ್ರ ಅಭಿವೃದ್ಧಿಗೆ ತಮ್ಮದೇಯಾದ ಕೊಡುಗೆ ನೀಡುವ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ನಿಷ್ಠೆಯಿಂದ ಶಿಕ್ಷಕ ವೃತ್ತಿಯನ್ನು ನಿರ್ವಹಿಸಿ, ಇಡೀ ಗ್ರಾಮಸ್ಥರಿಗೆ ಅಚ್ಚುಮೆಚ್ಚಿನ ಶಿಕ್ಷಕ ಎಂಬ ಹೆಗ್ಗಳಿಕೆಗೆ ಪಾತ್ರವಾದ ಶಿಕ್ಷಕ ತೀರ್ಥಕುಮಾರ್ ಅವರನ್ನು ಸಂಬಂಧ ಪಟ್ಟವರು ಏಕಾಏಕಿ ವರ್ಗಾವಣೆ ಮಾಡಿರುವುದು ನಿಜಕ್ಕೂ ಖಂಡನೀಯವಾಗಿದೆ ಎಂದು ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಇಂತಹದ್ದೊಂದು ಘಟನೆಗೆ ಸಾಕ್ಷಿಯಾದ ತಾಲ್ಲೂಕಿನ ಅಮ್ಮನ ಬ್ಯಾಡರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ, ಸದ್ಯ ಇದೇ ಶಾಲೆಯಲ್ಲಿ 14 ವಿದ್ಯಾರ್ಥಿಗಳಿದ್ದು, ಜಯಪ್ರಕಾಶ್ ಮತ್ತು ತೀರ್ಥ ಕುಮಾರ್ ಎಂಬ ಇಬ್ಬರು ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ 14 ವಿದ್ಯಾರ್ಥಿಗಳಿದ್ದರೂ ಶಿಕ್ಷಕ ತೀರ್ಥಕುಮಾರ್ ಅವರನ್ನು ಇಲಾಖೆ ವರ್ಗಾವಣೆ ಮಾಡಿರುವುದನ್ನು ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಮಾತನಾಡಿದ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ್ ಹಾಗೂ ಸದಸ್ಯ ಲೋಕೇಶ್ ಅವರು, ಹೇಳಿಕೇಳಿ ಅಮ್ಮನಬ್ಯಾಡರಹಳ್ಳಿಯಲ್ಲಿ ಸಂಪೂರ್ಣ ಪರಿಶಿಷ್ಟ ಪಂಗಡದವರು ವಾಸಿಸುತ್ತಿದ್ದಾರೆ. ಈ ಗ್ರಾಮದಲ್ಲಿ 100 ಕುಟುಂಬಗಳಿದ್ದು, ಅಂದಿನಿಂದಲೂ ಸರ್ಕಾರಿ ಶಾಲೆ ಉಳಿಸಬೇಕು ಎಂಬ ನಿಟ್ಟಿನಲ್ಲಿ ಮನೆ ಮನೆಗೆ ತೆರಳಿ ಮನವಿ ಮಾಡಿದ್ದರಿಂದ 14 ವಿದ್ಯಾರ್ಥಿಗಳು ತರಗತಿಯಲ್ಲಿ ಕಲಿಯುತ್ತಿದ್ದಾರೆ. ಇಬ್ಬರು ಶಿಕ್ಷಕರಲ್ಲಿ ತೀರ್ಥಕುಮಾರ್ ಎಂಬುವವರು ಇಡೀ ಗ್ರಾಮಸ್ಥರಲ್ಲಿ ಜನಮನ್ನಣೆ ಪಡೆದಿದ್ದಾರೆ. ಮಕ್ಕಳಿಗೆ ಪಠ್ಯದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಕಲಿಸುತ್ತಿದ್ದಾರೆ. ಕ್ರೀಡೆ ಸೇರಿದಂತೆ ಇನ್ನಿತರ ಚಟುವಟಿಕೆಗಳಿಗೆ ಅವರು ನೀಡುತ್ತಿರುವ ಆಸಕ್ತಿಯಿಂದಲೇ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಹಾಗೂ ಇಲಾಖೆ ಹೆಚ್ಚುವರಿ ಎಂಬ ಮಾನದಂಡದಲ್ಲಿ ತೀರ್ಥಕುಮಾರ್ ಅವರ ವರ್ಗಾವಣೆಗೆ ಮುಂದಾಗಿರುವುದು ಸರಿಯಿಲ್ಲ, ತಕ್ಷಣವೇ ಶಿಕ್ಷಕ ತೀರ್ಥ ಕುಮಾರ್ ಅವರನ್ನು ಇದೇ ಶಾಲೆಯಲ್ಲಿ ಉಳಿಸಬೇಕು. ಇಲ್ಲವಾದರೆ ಶಿಕ್ಷಣ ಇಲಾಖೆ ಮುಂದೆ ಉಗ್ರ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ವಿದ್ಯಾರ್ಥಿಗಳ ಪೋಷಕರಾದ ಹೇಮಾ ಎಂಬುವರು ಮಾತನಾಡಿ, ಶಿಕ್ಷಕ ತೀರ್ಥಕುಮಾರ್ ಅವರು ನಮ್ಮ ಶಾಲೆಗೆ ಆಗಮಿಸಿದ ದಿನದಿಂದ ಮಕ್ಕಳ ಕಲಿಕೆಯಲ್ಲಿ ಪ್ರಗತಿಯಾಗಿದೆ. ಅಲ್ಲದೆ ವಿವಿಧ ಚಟುವಟಿಕೆಗಳನ್ನು ಹೇಳಿ ಕೊಡುತ್ತಿದ್ದಾರೆ. ಈಗಾಗಲೇ ಶಿಕ್ಷಕರ ವರ್ಗಾವಣೆಯಿಂದ ಮಕ್ಕಳು ಎರಡು ದಿನದಿಂದ ಶಾಲೆಗೆ ಹೋಗಿಲ್ಲ, ಮೊದಲೆ ಅಮ್ಮನಬ್ಯಾಡರಹಳ್ಳಿ ಕಾಡಿನ ಮಧ್ಯೆ ಇರುವ ಕಾರಣದಿಂದ ಕಾಡು ಪ್ರಾಣಿಗಳ ಭಯದಿಂದ ಬೇರೆ ಕಡೆ ಹೋಗಲು ಸಾಧ್ಯವಿಲ್ಲ, ಹಾಗಾಗಿ ಮಕ್ಕಳ ಹಿತದೃಷ್ಟಿಯಿಂದ ಶಿಕ್ಷಕರನ್ನು ಉಳಿಸಿಕೊಡಿ ಎಂದರು.

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ಧರ್ಮನಾಯಕ್, ಸಂತೋಷ್, ಪ್ರಕಾಶ್, ಶಿವಶಂಕರ್, ಚಂದ್ರ ನಾಯಕ್, ತೀರ್ಥಕುಮಾರಿ, ಧನುಷ್, ಲಕ್ಷ್ಮಮ್ಮ, ಸುಂದರಮ್ಮ, ಪಾರ್ವತಮ್ಮ, ತುಂಗಮ್ಮ ಇತರರು ಭಾಗವಹಿಸಿದ್ದರು.

# ಸುಸ್ಥಿರ ಅಭಿವೃದ್ಧಿಯಲ್ಲಿ ದೇಶಕ್ಕೆ 99ನೇ ಸ್ಥಾನ

• ಪ್ರಜೋದಯ ವರದಿ




**ಹಾಸನ:** ಸುಸ್ಥಿರ ಅಭಿವೃದ್ಧಿಗಾಗಿ 13 ಗುರಿಗಳನ್ನು ಅಳವಡಿಕೊಳ್ಳಲಾಗಿದ್ದು, ನಮ್ಮ ದೇಶ ಸುಸ್ಥಿರ ಅಭಿವೃದ್ಧಿಯಲ್ಲಿ 99ನೇ ಸ್ಥಾನ ಪಡೆದಿದೆ ಎಂದು ನಿವೃತ್ತ ಸಹ ಪ್ರಾಧ್ಯಾಪಕಿ ಜೆ.ದೇವಕುಮಾರಿ ಅಭಿಪ್ರಾಯಪಟ್ಟರು.

ನಗರದ ಆರ್.ಸಿ. ರಸ್ತೆಯ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಈಚೆಗೆ ಹಮ್ಮಿಕೊಂಡಿದ್ದ ಸಮಕಾಲೀನ ಭಾರತೀಯ ಆರ್ಥಿಕತೆ-ಪ್ರಸ್ತುತ ಸಮಸ್ಯೆಗಳು ಮತ್ತು ಸವಾಲುಗಳು ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಆರ್ಥಿಕತೆಯ ಹಿನ್ನೆಲೆಯನ್ನು ತಿಳಿದುಕೊಂಡಗ ಭಾರತ ತುಂಬಾ ಹಿಂದೆ ಉಳಿದಿತ್ತು ಎಂದು ತಿಳಿಸಿದರು.

ಬ್ರಿಟಿಷರ ಅವಧಿಯಲ್ಲಿ ಜಿಡಿಪಿ ಕುಸಿದು ಹೋಗಿತ್ತು ಇದಕ್ಕೆ ಕಾರಣ ಕೃಷಿ ಇಲಾಖೆ ಹಿಂದೆ ಉಳಿದಿತ್ತು. ನೀರಾವರಿ ಸಮಸ್ಯೆ ಇತ್ತು. ನೀತಿ ಆಯೋಗವನ್ನು ರಚನೆ ಮಾಡಿತು ಸುಸ್ಥಿರ ಅಭಿವೃದ್ಧಿಯನ್ನು ವಿಶ್ವಸಂಸ್ಥೆ ಅಳವಡಿಸಿಕೊಂಡಿತ್ತು. ವಿಶ್ವ ಸಂಸ್ಥೆಯ ಪ್ರಕಾರ ಯಾವುದೇ ದೇಶ ಅಭಿವೃದ್ಧಿ ಪೂರಕವಾಗಿರಬೇಕು. ನಾವು ಅಭಿವೃದ್ಧಿ ಸಾಧಿಸಬೇಕು ಎಂದು ತಿಳಿಸಿದರು.

ಸಂಪನ್ಮೂಲಗಳನ್ನು ಮಿತವಾಗಿ ಬಳಸುವುದರೊಂದಿಗೆ ನಮ್ಮ ಮುಂದಿನ ಪೀಳಿಗೆಗೆ ಸುಭದ್ರ ಆರ್ಥಿಕತೆಯನ್ನು ಕಟ್ಟಿಕೊಡಬೇಕು. ನಮ್ಮ ದೇಶದ ಯುವ ಸಮುದಾಯ ದೇಶದ ಆರ್ಥಿಕತೆಯ ಬಗ್ಗೆ ತಿಳಿದುಕೊಂಡು ದೇಶದ ಪ್ರಗತಿಗೆ ಸಹಕಾರಿಯಾಗಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಮಾತನಾಡಿ, ವಿದ್ಯಾರ್ಥಿಗಳು ಅರ್ಥಶಾಸ್ತ್ರವನ್ನು ಸರಳವೆಂದು ಭಾವಿಸಿ ಅರ್ಥೈಸಿಕೊಳ್ಳಲು ಪ್ರಯತ್ನಿಸಬೇಕು, ಕಲಿಯಬೇಕು, ಪ್ರೋತ್ಸಾಹಿಸಬೇಕು. ಅರ್ಥಶಾಸ್ತ್ರ ವಿಷಯದಲ್ಲಿ ಉದ್ಯೋಗಾವಕಾಶಗಳು ವ್ಯಾಪಕವಾಗಿದ್ದು, ಅವಕಾಶಗಳನ್ನು ಬಳಕೆ ಮಾಡಿಕೊಳ್ಳಬೇಕಾದಲ್ಲಿ, ಕಠಿಣ ಪ್ರಯತ್ನ, ವಿನಯ- ವಿನಮ್ರತೆ, ಶಿಸ್ತು ಎಲ್ಲವೂ ಅವಶ್ಯಕವಾಗಿರುತ್ತದೆ. ಮಾನವರ ಜೀವನದಲ್ಲಿ ಅರ್ಥಶಾಸ್ತ್ರವು ಮುಖ್ಯ ಪಾತ್ರವನ್ನು ವಹಿಸಿದೆ. ಒಂದು ಉತ್ತಮ ಬದುಕು ಸಾಗಿಸಲು ಅರ್ಥಶಾಸ್ತ್ರವು ತುಂಬ ಮುಖ್ಯವಾಗಿರುತ್ತದೆ ಎಂದರು.

ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಹೇಮಾವತಿ, ಐ.ಕ್ಯೂ.ಎ.ಸಿ. ಸಂಚಾಲಕ ಮೋಹನ್‌ಕುಮಾರ್, ಸಹ ಸಂಚಾಲಕಿ ರಮ್ಯ, ಅಧ್ಯಾಪಕಿ ಡಾ. ಸುನೀತ ಹಾಗೂ ಇನ್ನಿತರರಿದ್ದರು.

# ಕ್ರೀಡಾ ಸ್ಪೂರ್ತಿಯಿಂದ ಮಾನಸಿಕ ಸ್ಥಿರತೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ವಿದ್ಯಾರ್ಥಿಗಳಲ್ಲಿ ಕ್ರೀಡಾ ಸ್ಪೂರ್ತಿ ಇದ್ದರೆ ಮಾತ್ರವೇ ದೈಹಿಕ ಸದೃಢತೆಯೊಂದಿಗೆ ಮಾನಸಿಕ ಸ್ಥಿರತೆ ಹೊಂದಲು ಸಾದ್ಯ ಎಂದು ಕಾಲೇಜು ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಪಿ.ಗಂಗಾಧರ್ ತಿಳಿಸಿದರು.

ಪಟ್ಟಣದ ಹೇಮಾವತಿ ಕ್ರೀಡಾಂಗಣದಲ್ಲಿ ಯುವಜನ ಕ್ರೀಡಾ ಇಲಾಖೆ ದೊಡ್ಡಕುಂಚೇವು ಗ್ರಾಮದ ನವೋದಯ ಪ.ಪೂ. ಕಾಲೇಜು ಸಹಯೋಗದೊಂದಿಗೆ ನಡೆಸಿದ್ದ ತಾಲ್ಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದೇ ಗುಣಾತ್ಮಕ ಪ್ರಕ್ರಿಯೆ. ಅದರಲ್ಲೂ ಸ್ಪರ್ಧಾ ಮನೋಭಾವ ಇರಿಸಿ ಭಾಗವಹಿಸುವುದು ಅತ್ಯಂತ ಪರಿಣಾಮಕಾರಿ. ಹೀಗಾಗಿ ಯುವಕರ ಸಬಲೀಕರಣಕ್ಕಾಗಿ ಸರಕಾರ ಕ್ರೀಡೋತ್ತೇಜನ ನೀಡುತ್ತಿದೆ. ಇದರಿಂದಾಗಿ ವಿದ್ಯಾರ್ಥಿಗಳು ತಮ್ಮ ಪಠ್ಯ ಕಲಿಕೆಯೊಂದಿಗೆ ಕ್ರೀಡಾ ಅಭ್ಯಾಸ ಇರಿಸಿಕೊಳ್ಳಬೇಕಿದೆ. ಎಲ್ಲರೂ ಗೆಲ್ಲಲು ಆಗದು. ಆದರೆ ಗೆದ್ದವರು ಒಂದಲ್ಲೊಂದು ಬಾರಿ ಸೋತಿರುತ್ತಾರೆ. ಸೋಲು ಗೆಲುವಿನ ಮೆಟ್ಟಿಲು ಎಂದರು.

ರಾಜ್ಯ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರ ಸಂಘದ ಉಪಾಧ್ಯಕ್ಷ ಬಿ.ಆರ್.ದೇವರಾಜ್, ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಟಿ.ಎಸ್.ಕುಮಾರಸ್ವಾಮಿ, ನವೋದಯ ವಿದ್ಯಾಸಂಘದ ಉಪಾಧ್ಯಕ್ಷ ಡಾ.ಎಸ್. ಪ್ರಮೋದ್, ನಿರ್ದೇಶಕ ಶಿವಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕ ಸುಜಾತ್ ಅಲಿ, ಬಿಸಿಎಂ ನಿವೃತ್ತ ನಿರ್ದೇಶಕ ಮಂಜುನಾಥ್ ಉಪಸ್ಥಿತರಿದ್ದರು.

# ಪಾಕಿಸ್ತಾನ ಜಿಂದಾಬಾದ್ ಕೂಗುವವರ ವಿರುದ್ಧ ಕ್ರಮವಿಲ್ಲ; ಸಿ.ಟಿ.ರವಿ ವಿರುದ್ಧ ಮಾತ್ರ

## ವಿದ್ರೋಹಿಗಳಿಗೆ ರಾಜ್ಯ ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕು ಸಾಬೀತು: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿ

• ಪ್ರಜೋದಯ ವರದಿ

**ಬೆಂಗಳೂರು:** ಪಾಕಿಸ್ತಾನ್ ಜಿಂದಾಬಾದ್ ಕೂಗುವವರು, ಪಾಕಿಸ್ತಾನ್ ಧ್ವಜ ಹಾರಿಸುವವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಹಿಂದೇಟು ಹಾಕುವ ಕಾಂಗ್ರೆಸ್ ಸರ್ಕಾರ, ಮದ್ದೂರಿನ ಗಣೇಶೋತ್ಸವದ ಮೇಲೆ ಕಲ್ಲು ತೂರಾಟ ನಡೆಸಿದ ದುಷ್ಕರ್ಮಿಗಳ ವಿರುದ್ಧ ಭಾವೋದ್ವೇಗದಲ್ಲಿ ಮಾತನಾಡಿರುವ ಸಿಟಿ ರವಿ ವಿರುದ್ಧ ಎಫ್ಐಆರ್ ದಾಖಲಿಸಿರುವುದು ವಿದ್ರೋಹಿಗಳಿಗೆ ಕುಮ್ಮಕ್ಕು ನೀಡುತ್ತಿರುವುದನ್ನು ಸಾಕ್ಷೀಕರಿಸಿದೆ ಎಂದು ಬಿಜೆಪಿ ಕಿಡಿಕಾರಿದೆ.

ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಬುಧವಾರ ನಡೆದ ಗಣೇಶ ಚತುರ್ಥಿ ಆಚರಣೆಯ ಸಂದರ್ಭದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಬಿಜೆಪಿ ಎಂಎಲ್‌ಸಿ ಸಿ.ಟಿ.ರವಿ ವಿರುದ್ಧ ಎಫ್ಐಆರ್ ದಾಖಲಾಗಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ವಿರುದ್ಧ ಬಿಜೆಪಿ ನಾಯಕರು ತೀವ್ರವಾಗಿ ಕಿಡಿಕಾರಿದ್ದಾರೆ.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮಾತನಾಡಿ, ಪಾಕಿಸ್ತಾನ್ ಜಿಂದಾಬಾದ್ ಕೂಗುವವರು, ಪಾಕಿಸ್ತಾನ್ ಧ್ವಜ ಹಾರಿಸುವವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಹಿಂದೇಟು ಹಾಕುವ ಕಾಂಗ್ರೆಸ್ ಸರ್ಕಾರ ಮದ್ದೂರಿನ ಗಣೇಶೋತ್ಸವದ ಮೇಲೆ ಕಲ್ಲು ತೂರಾಟ ನಡೆಸಿದ ದುಷ್ಕರ್ಮಿಗಳ ವಿರುದ್ಧ ಭಾವೋದ್ವೇಗದಲ್ಲಿ ಮಾತನಾಡಿರುವ ಸಿಟಿ ರವಿ ಅವರ ಮೇಲೆ ದಾಖಲಿಸುವ ಮೂಲಕ ತಮ್ಮದು ಪಕ್ಷಪಾತಿ ಸರ್ಕಾರ, ವಿದ್ರೋಹಿಗಳಿಗೆ



ಕುಮ್ಮಕ್ಕು ನೀಡುವ ಸರ್ಕಾರ ಎನ್ನುವುದನ್ನು ಸಾಕ್ಷೀಕರಿಸಿಕೊಂಡಿದೆ.

ಭಾರತೀಯತೆ, ಹಿಂದುತ್ವದ ಪರ ಹೋರಾಡುವುದು ಭಾರತೀಯ ಜನತಾ ಪಾರ್ಟಿಯ ಪರಮ ಆದ್ಯತೆ, ಅದನ್ನು ಹತ್ತಿಕ್ಕಲು ಎಷ್ಟೇ ಪ್ರಯತ್ನಿಸಿದರು ಅದನ್ನು ಮೆಟ್ಟಿ ನಿಲ್ಲುವ ಶಕ್ತಿ ಬಿಜೆಪಿಯ ಪ್ರತಿ ಕಾರ್ಯಕರ್ತರಿಗೂ ಇದೆ. ನಮ್ಮ ಪಕ್ಷದ ಪ್ರಮುಖರಾದ ಸಿ.ಟಿ ರವಿ ಅವರ ಮೇಲೆ ದಾಖಲಾಗಿರುವ, ಹೋರಾಟದ ಒಂದು ಭಾಗವೆಂದು ನಾವು ಸ್ವೀಕರಿಸಿದ್ದೇವೆ, ಕಾಂಗ್ರೆಸ್ ಸರ್ಕಾರದ ಈ ನಡೆಯನ್ನು ಜನರೇ ಧಿಕ್ಕರಿಸಲಿದ್ದಾರೆಂದು ಹೇಳಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಮಾತನಾಡಿ, ವಿರೋಧ ಪಕ್ಷದ ನಾಯಕರ ಧ್ವನಿ ಅಡಗಿಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಕೇಸು ದಾಖಲಿಸುತ್ತಿದೆ. ಈ ತರಹದ ದ್ವೇಷದ ರಾಜಕಾರಣ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ನಡೆದಿಲ್ಲ. ಸಿ. ಟಿ. ರವಿ ಅವರ ಮೇಲಿನ ಕೇಸ್ ಅನ್ನು ಸರ್ಕಾರ ಕೂಡಲೇ ವಾಪಸ್ ಪಡೆಯಬೇಕು. ಮದ್ದೂರಿನಲ್ಲಿ ಮುಸಲ್ಮಾನರೇ ಕಲ್ಲು ತೂರಾಟ ಮಾಡಿದ್ದು ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೇ ಒಪ್ಪಿಕೊಂಡಿದ್ದಾರೆಂದು ತಿಳಿಸಿದ್ದಾರೆ.

ಮದ್ದೂರಿನಲ್ಲಿ ಕಳೆದ ಭಾನುವಾರ ರಾತ್ರಿ ಗಣೇಶ ಅವಿಸರ್ಜನೆ ಮೆರವಣಿಗೆ ವೇಳೆ ಸಂಭವಿಸಿದ ಕಲ್ಲು ತೂರಾಟ, ಕೋಮು ದಳ್ಳುರಿಗೆ ಮತಾಂಧ ಮುಸ್ಲಿಂ ಕಿಡಿಗೇಡಿಗಳೇ ಕಾರಣ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರು ಒಪ್ಪಿಕೊಂಡಿರುವುದು ಸ್ವಾಗತಾರ್ಹವಾಗಿದೆ. ಆದರೆ, ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ.ಶಿವಕುಮಾರ್ ಅವರೂ ಈ ಸತ್ಯಾಂಶವನ್ನ ಒಪ್ಪಿಕೊಳ್ಳುತ್ತಾರಾ ಅಥವಾ ಸತ್ಯ ಹೇಳಿದ್ದಕ್ಕೆ ಮಾಜಿ ಸಚಿವ ರಾಜಣ್ಣ ಅವರನ್ನು ಏಕಾಏಕಿ ಸಂಪುಟದಿಂದ ವಜಾ ಮಾಡಿದ ರೀತಿ ಚಲುವರಾಯಸ್ವಾಮಿ ಅವರನ್ನೂ ಸಂಪುಟದಿಂದ ವಜಾ ಮಾಡುತ್ತಾರಾ? ಎಂದು ಅವರು ವಿಜಯೇಂದ್ರ ವ್ಯಂಗ್ಯವಾಡಿದ್ದಾರೆ.

# ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಮಾಹಿತಿ

• ಪ್ರಜೋದಯ ವರದಿ



**ಹಾಸನ:** ಕಾರೇಕೆರೆ ಕೃಷಿ ಮಹಾ ವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ತಾಲ್ಲೂಕಿನ ಹಂಪನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಮತ್ತು ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಯಿತು.

ವಿದ್ಯಾರ್ಥಿಗಳು ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯ ವೈಶಿಷ್ಟ್ಯಗಳನ್ನು ವಿವರಿಸಿ, 1998ರಲ್ಲಿ ಭಾರತ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಜಂಟಿಯಾಗಿ ರೂಪಿಸಿರುವ ಈ ಯೋಜನೆಯಡಿ ರೈತರು ಕಡಿಮೆ ಬಡ್ಡಿದರದಲ್ಲಿ ಸುಲಭವಾಗಿ ಸಾಲ ಪಡೆಯಬಹುದಾಗಿದೆ. ಆರಂಭಿಕ ಬಡ್ಡಿದರವು ವಾರ್ಷಿಕ ಶೇ.4 ರಷ್ಟು ಆಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ವಿವರಗಳನ್ನು ರೈತರಿಗೆ ತಿಳಿಸಲಾಯಿತು. ಈ ಯೋಜನೆಯಡಿ ಅರ್ಹ ರೈತರಿಗೆ ವಾರ್ಷಿಕ 6,000 ನೆರವು ನೀಡಲಾಗುತ್ತಿದೆ. ತಲಾ 2,000ರಂತೆ ಮೂರು ಕಂತುಗಳಲ್ಲಿ ನೇರವಾಗಿ ಬ್ಯಾಂಕ್ ಖಾತೆಗೆ ಜಮೆಯಾಗುತ್ತದೆ. ದೇಶದ ಸಣ್ಣ ಹಾಗು ಅತೀ ಸಣ್ಣ ರೈತ ಕುಟುಂಬಗಳಿಗೆ ಕನಿಷ್ಠ ಆದಾಯ ಬೆಂಬಲ ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು.

ಮಾಹಿತಿ ಪಡೆದುಕೊಂಡ ರೈತರು ಸರ್ಕಾರದ ಯೋಜನೆಗಳ ಸೌಲಭ್ಯಗಳ ಸದುಪಯೋಗ ಪಡೆಯಲು ಸಹಕಾರಿಯಾಗಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

# ಹಿಂದೂಗಳು ಸಂಘಟಿತರಾದರೆ ಮಾತ್ರ ಸನಾತನ ಧರ್ಮ ಉಳಿವು

• ಪ್ರಜೋದಯ ವರದಿ

**ಸಕಲೇಶಪುರ:** ಹಿಂದೂಗಳು ಸಂಘಟಿತರಾದರೆ ಮಾತ್ರ ಸನಾತನ ಧರ್ಮದೊಂದಿಗೆ ನಮ್ಮ ರಾಷ್ಟ್ರದ ರಕ್ಷಣೆ ಸಾಧ್ಯ ಎಂದು ಖ್ಯಾತ ಚಿಂತಕಿ, ವಾಗ್ಮಿ ಹಾರಿಕಾ ಮಂಜುನಾಥ್ ಹೇಳಿದರು.

ಪಟ್ಟಣದ ರಾಘವೇಂದ್ರ, ಬಡಾವಣೆಯಲ್ಲಿ ಗಣಪತಿ ಮಿತ್ರ ಮಂಡಳಿ ವತಿಯಿಂದ 51ನೇ ವರ್ಷದ ಗಣೇಶೋತ್ಸವ ಅಂಗವಾಗಿ ನಡೆದ ಧರ್ಮ ಮತ್ತು ಸಂಸ್ಕೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಣೇಶ ಹಬ್ಬವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿಚ್ಚು ಹತ್ತಿಸಿತ್ತು. ಈ ಗಣೇಶೋತ್ಸವವೂ ಎಲ್ಲಾ ಕ್ರಾಂತಿಕಾರಿ ಹಿಂದೂ ಭಾಂದವರನ್ನು ಸಂಘಟಿತರಾಗಿಸಲು ಪ್ರಮುಖ ಪಾತ್ರ ವಹಿಸಿತು. ಅದರ ಫಲವಾಗಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು ಎಂದರು.

ಸಾವಿರಾರು ವರ್ಷಗಳಿಂದ ನಮ್ಮ ಧರ್ಮದ ಮೇಲೆ ನಿರಂತರ ದಾಳಿಯಾಗುತ್ತಿದ್ದರೂ ಕೂಡ ನಮ್ಮ ಸನಾತನ ಧರ್ಮ ಗಟ್ಟಿಯಾಗಿ ನೆಲೆ ನಿಂತಿದೆ. ಅಂದರೆ ಅದು ನಮ್ಮ ಪೂರ್ವಜರ ಶ್ರಮ ಹಾಗೂ ಬಲಿದಾನದ ಫಲವಾಗಿದೆ. ತಾಯಂದಿರು ನಮ್ಮ ಸನಾತನ ಧರ್ಮದ ಸಂಸ್ಕೃತಿ, ಪರಂಪರೆಗಳನ್ನು ತಮ್ಮ ಮಕ್ಕಳಿಗೆ ತಿಳಿಸಬೇಕು. ನಮ್ಮ ಆಚಾರ-ವಿಚಾರ, ಧಾರ್ಮಿಕ ಸಂಕಲ್ಪಗಳನ್ನು ಅಳವಡಿಸಿಕೊಂಡು ಮುಂದಿನ ಪೀಳಿಗೆಗೆ ಧರ್ಮ ಸಂಸ್ಕಾರವನ್ನು ಉಳಿಸುವ ಕೆಲಸ ಮಾಡಬೇಕು ಎಂದರು.

ಇತ್ತೀಚೆಗೆ ನಮ್ಮ ಮೇಲೆ ವೈಚಾರಿಕ ಹಾಗೂ ಬೌದ್ಧಿಕ ದಾಳಿ ಹೆಚ್ಚಾಗುತ್ತಿರುವುದನ್ನು ಸಮರ್ಥವಾಗಿ ಎದುರಿಸಲು ನಾವು ಸಜ್ಜಾಗಿರಬೇಕು. ನಮ್ಮ ಜಾತಿ, ಮತ, ಪಂಗಡವನ್ನು ಕೇವಲ ಮನೆಯೊಳಗೆ ಸೀಮಿತಗೊಳಿಸಿದರೆ ಮಾತ್ರ ಧರ್ಮ ಪರಂಪರೆ ಉಳಿಯಲು ಸಾಧ್ಯ ಎಂದು ಅವರು ಕರೆ ನೀಡಿದರು.



ಒಮ್ಮೆ ಕಳೆದುಕೊಂಡ ರಾಮಜನ್ಮ ಭೂಮಿಯನ್ನು ಮರಳಿ ಪಡೆಯಲು ಸತತ 500 ವರ್ಷ ಹೋರಾಟ ಮಾಡಬೇಕಾಯಿತು. ಪ್ರತಿಯೊಬ್ಬ ಹಿಂದೂ ಬಾಂಧವರ ಮನೆಯಲ್ಲಿ ಭಜನೆ, ಸತ್ಸಂಗದಂತಹ ಧಾರ್ಮಿಕ ಆಚರಣೆಗಳನ್ನು ನಡೆಸುವುದರೊಂದಿಗೆ ಕಡ್ಡಾಯವಾಗಿ ದೇವಸ್ಥಾನಗಳಿಗೆ ಹೋಗುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಗೋಮಾತೆ ನಮ್ಮ ತಾಯಿ ಮಾತ್ರವಲ್ಲ, ಇಡೀ ಜಗತ್ತಿಗೆ ತಾಯಿ. ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಧರ್ಮ ನಮ್ಮದು. ನಾವು ಧರ್ಮದ ಹಾದಿಯಲ್ಲಿ ನಡೆದುಕೊಂಡು ಹೋದರೆ ಸಾಕು, ಅದು ನಮ್ಮನ್ನು ಕೈ ಹಿಡಿಯಲಿದೆ ಎಂದು ಎಲ್ಲಾ ಹಿಂದೂ ಭಾಂದವರಿಗೆ ಧರ್ಮ ಜಾಗೃತಿ ಮೂಡಿಸಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವತ್ ಮಾತನಾಡಿ, ಗಣೇಶೋತ್ಸವ ಆಚರಿಸಲು ಸರ್ಕಾರ ನಾನಾ ರೀತಿಯ ನಿಯಮ ರೂಪಿಸಿ ಹಿಂದೂಗಳ ಧಾರ್ಮಿಕ ಆಚರಣೆಗಳನ್ನು ಹತ್ತಿಕ್ಕುತ್ತಿದೆ ಎಂದು ಆರೋಪಿಸಿದರಲ್ಲದೆ, ಗಣೇಶೋತ್ಸವಗಳಲ್ಲಿ ಕಲ್ಲು ಎಸೆಯುವವರನ್ನು ರಕ್ಷಿಸಿ, ಅಮಾಯಕ ಹಿಂದೂಗಳ ಮೇಲೆ ಕೇಸ್ ದಾಖಲಿಸುವ ಕೆಲಸ ಮಾಡುತ್ತಿದೆ. ಎಲ್ಲಾ ಹಿಂದೂ ಬಾಂಧವರು ಮನೆಯಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣದೊಂದಿಗೆ ನಮ್ಮ ಧರ್ಮದ ಆಚಾರ-ವಿಚಾರ, ಸಂಸ್ಕಾರಗಳನ್ನು ಕಲಿಸುವ ಕೆಲಸವನ್ನು ಕಡ್ಡಾಯವಾಗಿ ಮಾಡಬೇಕು ಎಂದರು.

ಗಣಪತಿ ಮಿತ್ರ ಮಂಡಳಿಯ ಸುರೇಶ್, ಪುರಸಭೆ ಸದಸ್ಯ ಬಿ.ಕೆ. ಮೋಹನ್, ಮಾಜಿ ಸದಸ್ಯ ಮಹೇಶ್, ದಿವಾಕರ್, ವಿಜಯಕುಮಾರ್, ರಘು, ಅರುಣ್‌ಕುಮಾರ್, ವಿಷ್ಣು ಇದ್ದರು.

# ಸೆ.13, 14 ರಂದು ಮೈಸೂರು ವಿಭಾಗ ಮಟ್ಟದ ದಸರಾ ಕ್ರೀಡಾಕೂಟ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಸೆ.13 ಮತ್ತು 14 ರಂದು ಬೆ.10 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಮೈಸೂರು ವಿಭಾಗ ಮಟ್ಟದ ದಸರಾ ಕ್ರೀಡಾಕೂಟ ಆಯೋಜಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿ.ದೇವೇಗೌಡ ಅವರು ಘನ ಉಪಸ್ಥಿತಿವಹಿಸಲಿದ್ದಾರೆ. ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ, ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ, ಶಾಸಕರಾದ ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರುಗಳಾದ ಹೆಚ್.ಡಿ.ರೇವಣ್ಣ, ಡಾ.ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ಡಾ|| ಸೂರಜ್ ರೇವಣ್ಣ ಹಾಗೂ ಮಹಾನಗರ ಪಾಲಿಕೆಯ ಮಹಾಪೌರರಾದ ಎನ್.ಹೇಮಲತ ಕಮಲ್‌ಕುಮಾರ್, ಕ್ರೀಡಾ ಇಲಾಖೆ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಇನ್ನಿತರರಿರುವರು.

# ರೋಟರಿ ಕ್ಲಬ್ ಆಫ್ ಸೆಂಟ್ರಲ್‌ನಿಂದ ಶಿಕ್ಷಕರ ದಿನಾಚರಣೆ

• ಪ್ರಜೋದಯ ವರದಿ



**ಹಾಸನ:** ರೋಟರಿ ಕ್ಲಬ್ ಆಫ್ ಸೆಂಟ್ರಲ್ ಹಾಸನ ವತಿಯಿಂದ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿತ್ ಭವನದಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕ್ಲಬ್ ಅಧ್ಯಕ್ಷ ರೊ. ಎಂ.ಡಿ. ನಾಗೇಶ್ ಅವರು ಮಾತನಾಡಿ, ಶಿಕ್ಷಕರು ಕೇವಲ ಪಾಠ ಹೇಳುವವರಲ್ಲ, ವಿದ್ಯಾರ್ಥಿಗಳ ಜೀವನ ರೂಪಿಸುವ ಶಿಲ್ಪಿಗಳು. ಸಮಾಜಕ್ಕೆ ನಿಷ್ಠಾವಂತ, ಜವಾಬ್ದಾರಿಯುತ ನಾಗರಿಕರನ್ನು ತಯಾರಿಸುವಲ್ಲಿ ಶಿಕ್ಷಕರ ಪಾತ್ರ ಅಪಾರವೆಂದು ತಿಳಿಸಿದರು.

ಉಪನ್ಯಾಸಕ ಪ್ರಕಾಶ್ ಮೇಗಲಕೇರಿ ಅವರು ಮಾತನಾಡಿ, ಡಾ. ಎಸ್. ರಾಧಾಕೃಷ್ಣನ್ ಅವರ ಜನ್ಮದಿನವನ್ನು ಶಿಕ್ಷಕರ ದಿನವಾಗಿ ಆಚರಿಸುವ ಪರಂಪರೆಯನ್ನು ಸ್ಮರಿಸಿದರು. ಪ್ರಗತಿಶೀಲ ಸಮಾಜಕ್ಕೆ ಶಿಕ್ಷಣ ಮುಖ್ಯವಾಗಿದ್ದು ಅದಕ್ಕೆ ಆಧಾರ ಶಿಕ್ಷಕರು. ಅವರ ಪರಿಶ್ರಮದಿಂದಲೇ ವಿದ್ಯಾರ್ಥಿಗಳು ಜ್ಞಾನಪೂರ್ಣ ಭವಿಷ್ಯವನ್ನು ಕಟ್ಟಿಕೊಳ್ಳುತ್ತಾರೆಂದರು.

ಉಪನ್ಯಾಸಕ ಹರೀಶ ಅವರು ಮಾತನಾಡಿ, ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಬಹುದೊಡ್ಡದು. ಶಿಕ್ಷಕರ ಪರಿಶ್ರಮವಿಲ್ಲದೆ ಮಹತ್ತರವಾದ ಸಾಧನೆ ಯಾರಿಂದಲೂ ಸಾಧ್ಯವಿಲ್ಲವೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ಸನ್ಮಾನಿಸಲಾಯಿತು. ಗೌರವ ಸ್ವೀಕರಿಸಿದ ಶಿಕ್ಷಕರು ತಮ್ಮ ಅನುಭವ ಹಂಚಿಕೊಂಡು, ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಬದ್ಧತೆ ಪ್ರದರ್ಶಿಸಿದರು. ಕ್ಲಬ್ ಕಾರ್ಯದರ್ಶಿ ರೊ. ಅಶೋಕ್, ಖಜಾಂಚಿ ಯೋಗೇಶ್ ಗೌಡ, ಭಾರತಿ, ಅನುಪಮ ವೇದಿಕೆಯಲ್ಲಿದ್ದರು.

ಪುಟಾಣಿ ಇಶಾನ್ ಶಿಕ್ಷಕರ ಕುರಿತು ಮಾಡಿದ ಭಾಷಣ ಗಮನ ಸೆಳೆಯಿತು. ರೋ. ಬಿ.ಆರ್.ಬೊಮ್ಮೇಗೌಡ ಅವರು ಕಾರ್ಯಕ್ರಮ ನಿರೂಪಿಸಿದರು. ನಭಾ ನಾಗೇಶ್ ಅವರು ಪ್ರಾರ್ಥಿಸಿದರು. ರೋ. ಆರ್.ಕೆ. ದಯಾನಂದ್ ಅವರು ವಂದಿಸಿದರು.

# ನೇಕಾರರ ಸಮ್ಮಾನ್ ಯೋಜನೆಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಕೈಮಗ್ಗ ಮತ್ತು ಜವಳಿ ಇಲಾಖೆಯು ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ನೇಕಾರಿಕೆ ವೃತ್ತಿಯಲ್ಲಿ ತೊಡಗಿರುವ ನೇಕಾರರಿಗೆ ವಾರ್ಷಿಕವಾಗಿ ರೂ.5,000 ಗಳನ್ನು ನೀಡಲು ನೇಕಾರರ ಸಮ್ಮಾನ್ ಯೋಜನೆಯಡಿ ಈಗಾಗಲೇ 2025-26 ನೇ ಸಾಲಿಗೆ ನೊಂದಾಯಿತರಾಗಿರುವ ನೇಕಾರರಿಂದ ಹಾಗೂ ನೇಕಾರಿಕೆಗೆ ಸಂಬಂಧಿಸಿದ ಇತರೆ ಚಟುವಟಿಕೆಗಳಲ್ಲಿ ತೊಡಗಿರುವ ಕೈಮಗ್ಗ/ ವಿದ್ಯುತ್ ಮಗ್ಗ ನೇಕಾರರಿಂದ ಹೊಸದಾಗಿ ಅರ್ಜಿಗಳನ್ನು ಪಡೆದು ಅರ್ಹರಿರುವ ನೇಕಾರರ ಅರ್ಜಿಗಳನ್ನು ಸೇವಾ ಸಿಂಧು ಪೋರ್ಟನಲ್ಲಿ ಅಪ್‌ಲೋಡ್ ಮಾಡಲು ತಿಳಿಸಲಾಗಿರುತ್ತದೆ.

ಅದರಂತೆ 2024-25 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಈಗಾಗಲೇ ಸೌಲಭ್ಯ ಪಡೆದಿರುವ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಂದ ಹಾಗೂ ಕೈಮಗ್ಗ, ವಿದ್ಯುತ್ ಮಗ್ಗ ನೇಯ್ಗೆಗೆ ಸಂಬಂಧಿಸಿದ ಇತರೆ ಚಟುವಟಿಕೆಯಲ್ಲಿ ತೊಡಗಿರುವ ಅರ್ಹ ನೇಕಾರರಿಂದ, ನೇಕಾರ ಸಹಕಾರ ಸಂಘಗಳ ಮೂಲಕ ಅರ್ಜಿ ಪಡೆಯಲಾಗುತ್ತಿದ್ದು, ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಈ ಕೆಳಕಂಡ ದಾಖಲಾತಿಗಳೊಂದಿಗೆ ನೇಕಾರ ಸಹಕಾರ ಸಂಘಗಳ ಮೂಲಕ ಅಥವಾ ನೇರವಾಗಿ ಸಹಾಯಕ ನಿರ್ದೇಶಕರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಬಿ.ಎಂ. ರಸ್ತೆ, ಹೆಚ್.ಡಿ.ಸಿ.ಸಿ ಬ್ಯಾಂಕ್ ಹತ್ತಿರ, ಡೈರಿ ಸರ್ಕಲ್, ಹಾಸನ ಕಚೇರಿಗೆ ಸೆ.25 ರೊಳಗಾಗಿ ಸಲ್ಲಿಸುವಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಳಪೆ ರಸ್ತೆ ಕಾಮಗಾರಿ: ಗ್ರಾಮಸ್ಥರ ಅಕ್ರೋಶ

• ಪ್ರಜೋದಯ ವರದಿ



**ಹಾರನಹಳ್ಳಿ:** ಇಲ್ಲಿನ ಆಂಜನೇಯ ದೇವಾಲಯದಿಂದ ಜಾವಗಲ್ ತಿರುವು ವರಗೆ ರಾಜ್ಯ ಹೆದ್ದಾರಿ- 105 ಅರಸೀಕೆರೆ -ಹಾಸನ ಮುಖ್ಯ ರಸ್ತೆ ಅಗಲೀಕರಣ ಕಾಮಗಾರಿ ಮುಗಿದು ತಿಂಗಳು ಕಳೆಯುವಷ್ಟರಲೆಯೇ ರಸ್ತೆಗೆ ಹಾಕಿದ ಡಾಂಬರ್ ಕಿತ್ತು ಹೋಗುತ್ತಿದ್ದು ಇದು ಸಾರ್ವಜನಿಕರ ಅಕ್ರೋಶಕ್ಕೆ ಕಾರಣವಾಗಿದೆ.

ಸಾವಿರಾರು ವಾಹನಗಳು ಅರಸೀಕೆರೆ -ಹಾಸನ ಮಾರ್ಗವಾಗಿ ಪ್ರತಿ ನಿತ್ಯ ಸಂಚಾರ ನಡೆಸುತ್ತಿದ್ದು ಸುಮಾರು ಎರಡುವರೆ ಕೋಟಿ ರೂ. ಅನುದಾನದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಈ ರಸ್ತೆ ಕಾಮಗಾರಿ ನೆಡೆದಿದ್ದು, ಮಳೆ ಬರುವ ಮುಂಚೆಯೇ ಹಾಕಿದ ಡಾಂಬರ್ ಕಿತ್ತು ಗುಂಡಿ ಬೀಳುತ್ತಿದೆ. 2 ವರ್ಷದಿಂದ ರಸ್ತೆ ಕಾಮಗಾರಿ ವಿಳಂಬ ಮಾಡಿ ಇದೀಗ ಈ ತರಹ ರಸ್ತೆ ಕಳಪೆ ಕಾಮಗಾರಿ ಮಾಡುವುದಕ್ಕಾ ಎಂದು ಗ್ರಾಮಸ್ಥರ ಅಕ್ರೋಶಕ್ಕೆ ಕಾರಣವಾಗಿದೆ.

ರಸ್ತೆಯ ವಿಭಜಕದಲ್ಲಿ ಕುರುಚಲು ಗಿಡಗಳು ಬೆಳೆದು ನಿಂತಿವೆ. ವಿಭಜಕದಲ್ಲಿ ಲೈಟುಗಳನ್ನು ಅಳವಡಿಸಿಲ್ಲ, ಇದರಿಂದ ರಾತ್ರಿ ಸಂಧರ್ಭದಲ್ಲಿ ಕತ್ತಲೆ ಅವರಿಸಿದ್ದು, ಜಾವಗಲ್ ವೃತ್ತ ಮತ್ತು ಹಾರನಹಳ್ಳಿ ಊರಿನೊಳಗೆ ಹೋಗುವ ರಸ್ತೆ, ಜನತಾ ಬಡಾವಣೆಗೆ ಹೋಗುವ ವೃತ್ತ ಅಗಲೀಕರಣ ಮಾಡಿ ಡಾಂಬರ್ ಹಾಕಬೇಕಾಗಿದೆ. ತಕ್ಷಣ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಗಮನ ಹರಿಸುವಂತೆ ಮತ್ತು ಸೂಕ್ತ ರೀತಿಯಲ್ಲಿ ರಸ್ತೆಯ ಕಾಮಗಾರಿ ಕೆಲಸಗಳನ್ನು ಮಾಡಿಸುವಂತೆ, ರಸ್ತೆಯ ವಿಭಜಕಗಳಲ್ಲಿ ಹೂವಿನ ಗಿಡಗಳನ್ನು ಹಾಕಿಸುವಂತೆ ಗ್ರಾಮಸ್ಥರುಗಳು ಒತ್ತಾಯಿಸಿದ್ದಾರೆ.

> ಹಾರನಹಳ್ಳಿ ಗ್ರಾಪಂ ಎದುರು ರಸ್ತೇಯ ವಿಭಕಜಕ ತಿರುವಿನಲ್ಲಿ ಹಾಗೂ ಯೂನಿಯನ್ ಬ್ಯಾಂಕ್ ಇಳಿಜಾರು ರಸ್ತೆಯಲ್ಲಿ ಸರಿಯಾಗಿ ಮೇಟಲಿಂಗ್ ಮಾಡದೆ ಇರುವುದರಿಂದ ರಸ್ತೆ ಗುಂಡಿ ಬಿದ್ದಿದ್ದೆ ರಸ್ತೆ ಬಿರು ಬರುತ್ತಿದ್ದೆ ತಕ್ಷಣ ದುರಸ್ತಿ ಮಾಡಿಸ ಬೇಕಾಗಿದೆ.
> -ಕೃಷ್ಣಪ್ಪ ಮಾಜಿ ಗ್ರಾಪಂ ಸದಸ್ಯರು


> ಅರಸೀಕೆರೆ ಹಾಗೂ ಜಾವಗಲ್ ಕಡೆಗಳಿಂದ ಬರುವ ವಾಹನಗಳು ಹಾರನಹಳ್ಳಿ -ಜಾವಗಲ್ ಕಡೆ ನೇರವಾಗಿ ತಿರುಗುತ್ತಿವೆ. ಇದರಿಂದ ಹಾಸನ ಕಡೆಯಿಂದ ಅರಸೀಕೆರೆ ಹೋಗುವ ವಾಹನಗಳು ವೇಗವಾಗಿ ಚಲಿಸುವುದರಿಂದ ಅಪಘಾತಗಳು ಹೆಚ್ಚಾಗುವ ಸಂಭವ ಇದೆ. ಈ ಹಿನ್ನಲೆಯಲ್ಲಿ ಈ ವೃತ್ತವನ್ನು ಅಗಲೀಕರಣ ಮಾಡಿ ಸರ್ಕಲ್ ಮಾಡಬೇಕಾಗಿದೆ.
> -ನಂದೀಶ್, ಗ್ರಾಪಂ ಮಾಜಿ ಅಧ್ಯಕ್ಷ, ಹಾರನಹಳ್ಳಿ.

> ಈ ರಸ್ತೆಯಲ್ಲಿ ಲೈಟ್ ಇಲ್ಲದೆ ಇರುವುದರಿಂದ ರಾತ್ರೀ ಸಮಯದಲ್ಲಿ ಗ್ರಾಮಸ್ಥರುಗಳು ಲೆ ಓಡಾಟ ನೆಡೆಸಲು ಕಷ್ಟ ವಾಗಿದೆ. ಈ ರಸ್ತೆಯಲ್ಲಿ ನಾಯಿ ಕಾಟ ಹೆಚ್ಚಿದ್ದು ರಾತ್ರಿ, ಸಮಯದಲ್ಲಿ ಗ್ರಾಮಸ್ಥರುಗಳ ಮೇಲೆ ನಾಯಿಗಳು ಎರಗು ಬೀಳುತ್ತಿವೆ. ತಕ್ಷಣ ರಸ್ತೆ ವಿಭಜಕಗಳ ಮಧ್ಯೆ ಲೈಟು ಹಾಕಿಸುವಂತೆ ಹಾರನಹಳ್ಳಿಯಲ್ಲಿ ಎರಡು ಪುರಾತನ ಹೊಯ್ಸಳರ ಕಾಲದ ದೇವಾಲಯವಿದ್ದು ಈ ದೇವಾಲಯ ನೋಡಲು ದೇಶಿಯ ವಿದೇಶಿ ಪ್ರವಾಸಿಗರು ಬರುತ್ತಿದ್ದು ಮುಖ್ಯ ರಸ್ತೆಯಲ್ಲಿ ವಿಶೇಷ ದ್ವಾರ ಮತ್ತು ನಾಮಫಲಕಗಳನ್ನು ಹಾಕಿಸಬೇಕು.
> - ಹೆಚ್.ಎಂ. ಮಲ್ಲಿಕಾರ್ಜುನ ಸ್ವಾಮಿ,
> ಹಿರಿಯ ಕಾಂಗ್ರೆಸ್ ಮುಖಂಡರು, ಹಾರನಹಳ್ಳಿ.

## ಧೂಮಪಾನ, ಮದ್ಯಪಾನ, ಮಾಂಸಹಾರದಿಂದ ದೂರವಿರಿ: ಡಾ|| ನಿರೂಪ್

# ಜಂಕ್‌ಫುಡ್ ಬಳಕೆಯಿಂದ ಹೃದಯಾಘಾತ

• ಪ್ರಜೋದಯ ವರದಿ



**ಆಲೂರು:** ರಕ್ತವು ಸದಾ ರಕ್ತನಾಳಗಳಲ್ಲಿ ಸರಾಗವಾಗಿ ಹರಿಯುವಂತೆ ಕಾಪಾಡಿಕೊಂಡರೆ ಹೃದಯಾಘಾತ ಸಂಭವಿಸುವುದನ್ನು ತಡೆಯಬಹುದು ಎಂದು ಹೃದಯ ತಜ್ಞವೈದ್ಯ ಡಾ. ನಿರೂಪ್ ತಿಳಿಸಿದರು.

ಪಟ್ಟಣದ ಆಲೂರು ಕ್ಲಿನಿಕ್ ಆವರಣದಲ್ಲಿ ಇಂಡಿಯಾನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಹಾರ್ಟ್ ಸೆಂಟರ್, ಹಾಸನ ಮತ್ತು ಆಲೂರು ಕ್ಲಿನಿಕ್, ಆಲೂರು ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಉಚಿತ ಹೃದಯ ಮತ್ತು ಮೂಳೆ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅತಿಯಾಗಿ ಕೊಬ್ಬಿನಂಶವುಳ್ಳ ಆಹಾರ ಸೇವಿಸುವುದು, ಧೂಮಪಾನ, ಮದ್ಯಪಾನ ಮಾಡುವುದು, ಕನಿಷ್ಠ ವ್ಯಾಯಾಮ ಮಾಡದಿರುವುದು, ಹೆಚ್ಚು ಸಮಯ ಒಂದೇ ಜಾಗದಲ್ಲಿ ಕುಳಿತುಕೊಳ್ಳುವುದು, ಮೈದಾಹಿಟ್ಟು ಬಳಕೆ, ಕಳಪೆ ಎಣ್ಣೆಯಿಂದ ತಯಾರಿಸಿದ ಆಹಾರ ಸೇವಿಸುವುದು, ಒಮ್ಮೆ ಕರಿದ ಎಣ್ಣೆಯನ್ನು ಪುನ: ಉಪಯೋಗಿಸಬಾರದು, ಅತಿ ಹೆಚ್ಚಾಗಿ ಮಾಂಸಹಾರ ಸೇವನೆ, ಅತಿಯಾಗಿ ಸಕ್ಕರೆ ಬಳಸುವುದು ಮತ್ತು ಜಂಕ್‌ಫುಡ್ ಸೇವನೆಯಿಂದ ಹೃದಯಾಘಾತ ಸಂಭವಿಸುತ್ತದೆ ಎಂದರು.

ಪ್ರತಿದಿನ ಕನಿಷ್ಟ ಅರ್ಧ ಗಂಟೆ ಓಡಾಡುವುದು, ವ್ಯಾಯಾಮ ಮಾಡುವುದು, ಆದಷ್ಟು ಆಹಾರದಲ್ಲಿ ಎಣ್ಣೆ ಕಡಿಮೆ ಬಳಸಬೇಕು. ದೇಹದ ತೂಕ ಅತಿಯಾಗದಂತೆ ಜಾಗ್ರತೆ ವಹಿಸಬೇಕು. ದಿನಕ್ಕೆ ಕನಿಷ್ಠ ಎಂಟು ಗಂಟೆ ನಿದ್ರೆ ಮಾಡಿದರೆ ಹೃದಯಾಘಾತದಿಂದ ತಪ್ಪಿಸಿಕೊಳ್ಳಬಹುದು. ಕೆಲವೊಮ್ಮೆ ಮಗು ತಾಯಿಯ ಹೊಟ್ಟೆಯಲ್ಲಿದ್ದಾಗಲೆ ಹೃದಯ ತೂತುವಾಗುತ್ತದೆ. ಇದಕ್ಕೆ ಚಿಕಿತ್ಸೆ ಲಭ್ಯವಿದೆ ಎಂದರು.

ಡಾ. ನಯೀಮ್ ಸಿದ್ದಿಖ್ ಮಾತನಾಡಿ, ಮನುಷ್ಯನ ಪ್ರಾಯ 50-60 ದಾಟಿದ ನಂತರ ದೇಹದ ಮೂಳೆಗಳು ಸವೆಯುತ್ತವೆ. ಬೆಳಿಗ್ಗೆ ವೇಳೆಯಲ್ಲಿ ಕನಿಷ್ಟ 2 ಗಂಟೆ ಕಾಲ ಸೂರ್ಯನ ಕಿರಣ ನಮ್ಮ ದೇಹವನ್ನು ಸ್ಪರ್ಷಿಸಿದಾಗ ವಿಟಮಿನ್-12 ಕೊರತೆ ನಿವಾರಣೆಯಾಗುತ್ತದೆ. ಇದರಿಂದ ಮೂಳೆಗಳು ಬಲಿಷ್ಟವಾಗಿ ಬೆಳೆಯುತ್ತವೆ. ಇತ್ತೀಚೆಗೆ ವಿಶೇಷವಾಗಿ ಮಹಿಳೆಯರು ಮನೆಗಳಲ್ಲಿ ನಿಂತು ಅಡುಗೆ ಮಾಡುವುದು ರೂಢಿಯಾಗಿರುವುದರಿಂದ ಶೇ. 80 ರಷ್ಟು ಮಂಡಿ ನೋವಿನಿಂದ ಬಳಲುತ್ತಿದ್ದಾರೆ. ಕುಳಿತು ಅಡುಗೆ ಮಾಡಲು ಸ್ಟೂಲ್‌ಗಳಿವೆ. ಅವುಗಳನ್ನು ಸಾಧ್ಯವಾದಷ್ಟು ಬಳಸುವುದರಿಂದ ಮಂಡಿ ನೋವು ಕಡಿಮೆಯಾಗುತ್ತದೆ. ಪೌಷ್ಟಿಕ ಆಹಾರ ಸೇವಿಸುವುದರಿಂದ, ದೇಹದ ತೂಕ ಅತಿಯಾಗದಂತೆ ಜಾಗ್ರತೆ ವಹಿಸುವುದರಿಂದ ಮೂಳೆ ಸವೆತವನ್ನು ತಪ್ಪಿಸಬಹುದು ಎಂದರು.

ಸುಮಾರು 150 ಜನ ಉಚಿತ ತಪಾಸಣೆಯಲ್ಲಿ ಪಾಲ್ಗೊಂಡಿದ್ದರು. ಡಾ. ಗಿರೀಶ್‌ಬಸಪ್ಪ, ಡಾ. ಕವಿತಾ, ದಾದಿಯರಾದ ಭವಾನಿ, ಪವಿತ್ರ, ತಾರಾಮಣಿ, ಪ್ರಿಯಾಂಕ, ಲಕ್ಷ್ಮಿ ಸಹಕಾರ ನೀಡಿದರು.

# ಜಾತಿ ಗಣತಿಗೆ 420 ಕೋಟಿ ರೂ. ನಿಗದಿ

## ಸೆ.22 ರಿಂದ ಅ.7ರ ವರೆಗೆ ಸಮೀಕ್ಷೆ | 1.75 ಲಕ್ಷ ಶಿಕ್ಷಕರ ನಿಯೋಜನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ಸೆ.22ರಿಂದ ಅಕ್ಟೋಬರ್ 7ರ ವರೆಗೆ ನಡೆಯಲಿದ್ದು ಅದಕ್ಕಾಗಿ 420 ಕೋಟಿ ರೂ. ನಿಗದಿಪಡಿಸಲಾಗಿದೆ.

ಸಮಿತಿಯ ಮೊದಲ ಭಾಗವಾಗಿ ರಾಜ್ಯಾದ್ಯಂತ ಮನೆ ಬಾಗಿಲಿಗೆ ಸ್ಟಿಕ್ಕರ್ ಅಂಟಿಸುವ ಕಾರ್ಯ ನಡೆದಿದೆ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಾಹಿತಿ ನೀಡಿದ್ದು, ನಾಡಿನ 7 ಕೋಟಿ ಜನರ ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ಮಧುಸೂಧನ ನಾಯ್ಕ್ ಅವರ ಅಧ್ಯಕ್ಷತೆಯಲ್ಲಿ ಆಯೋಗ ಸಮೀಕ್ಷೆ ಕಾರ್ಯ ಕೈಗೊಳ್ಳಲಿದೆಯೆಂದು ತಿಳಿಸಿದ್ದಾರೆ.

ಆದಷ್ಟು ಎಚ್ಚರಿಕೆಯಿಂದ, ಪ್ರತಿಯೊಬ್ಬರನ್ನೂ ಒಳಗೊಂಡಂತೆ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ಡಿಸೆಂಬರ್ ಒಳಗಾಗಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ದಸರಾ ರಜೆ ಅವಧಿಯಲ್ಲಿ ಶಿಕ್ಷಕರ ಸೇವೆಯನ್ನು ಬಳಸಿಕೊಂಡು ಸಮೀಕ್ಷೆ ಕಾರ್ಯ ನಡೆಯಲಿದೆಯೆಂದು ಹೇಳಿದ್ದಾರೆ.

1.75 ಲಕ್ಷ ಶಿಕ್ಷಕರನ್ನು ಈ ಕಾರ್ಯಕ್ಕೆ ಬಳಸಲಾಗುವುದು. ಅವರಿಗೆ 20 ಸಾವಿರ ರೂ. ವರೆಗೆ ಗೌರವ ಸಂಭಾವನೆ ನೀಡಲಾಗುವುದು. ಶಿಕ್ಷಕರ ಸಂಭಾವನೆಗೆ 325 ಕೋಟಿ ರೂ. ವೆಚ್ಚವಾಗಲಿದೆ. ತಾತ್ಕಾಲಿಕವಾಗಿ 420 ಕೋಟಿ ರೂ. ಸಮೀಕ್ಷೆ ಕಾರ್ಯಕ್ಕೆ ನಿಗದಿಪಡಿಸಲಾಗಿದೆ. ಅಗತ್ಯ ಬಿದ್ದರೆ ಹೆಚ್ಚುವರಿ ಅನುದಾನ ಒದಗಿಸಲಾಗುವುದೆಂದು ಹೇಳಿದ್ದಾರೆ.








ಪ್ರತಿಯೊಬ್ಬರ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ಸ್ಥಿತಿಗತಿ ಗೊತ್ತಾದರೆ ಮಾತ್ರ ಕಲ್ಯಾಣ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನ ಸಾಧ್ಯವಿದೆ. ದತ್ತಾಂಶ ಸರಿಯಾಗಿ ಗೊತ್ತಾದರೆ ಮಾತ್ರ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಸಾಧ್ಯವೆಂದು ಅವರು ಪ್ರತಿಪಾದಿಸಿದ್ದಾರೆ. ಗ್ಯಾರಂಟಿ ಯೋಜನೆಗಳ ಮೂಲಕ ಅಸಮಾನತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಲು ಪ್ರಯತ್ನ ಮಾಡಿದ್ದೇವೆ. ನಾವು ಹಿಂದೆ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಭಾಗ್ಯ ಯೋಜನೆಗಳ ಮೂಲಕ ಸಹ ಇದನ್ನು ಸಾಧಿಸಲು ಪ್ರಯತ್ನಿಸಿದ್ದೇವೆ. ಹಿಂದುಳಿದವರ ಬಡತನ, ನಿರುದ್ಯೋಗ, ಅನಕ್ಷರತೆ ಹೋಗಬೇಕಾದರೆ ವಿಶೇಷ ಪ್ರಯತ್ನದ ಅಗತ್ಯವಿದೆಯೆಂದು ತಿಳಿಸಿದ್ದಾರೆ.

### ಹೇಗೆ ನಡೆಯುತ್ತೆ ಜಾತಿ ಗಣತಿ

150 ಮನೆಗಳಿಗೆ ಒಬ್ಬರು ಶಿಕ್ಷಕರನನ್ನು ಗಣತಿದಾರರಾಗಿ ನೇಮಿಸಲಾಗಿದೆ. ಆಯೋಗವು ಸಿದ್ಧಪಡಿಸಿದ ಪ್ರಶ್ನಾವಳಿಗಳನ್ನು ಬಳಸಿ, ಕುಟುಂಬದ ಪ್ರತಿ ಸದಸ್ಯನ ವಿವರವನ್ನು ಕೂಡಾ ಸಂಗ್ರಹಿಸಲಿದ್ದಾರೆ. ಈ ವೇಳೆಯಲ್ಲಿ ಹೆಸರು, ವಯಸ್ಸು, ಲಿಂಗ ಸೇರಿ ಶೈಕ್ಷಣಿಕ ಅರ್ಹತೆ, ಉದ್ಯೋಗ, ಜಾತಿ, ಉಪಜಾತಿ, ಧರ್ಮ ಹಾಗು ಮಾತೃಭಾಷೆ, ಆದಾಯದ ಮೂಲ, ಕುಟುಂಬದ ಆದಾಯ, ಆಸ್ತಿಪಾಸ್ತಿಯ ವಿವರ ಸೇರಿದಂತೆ 60 ಪ್ರಶ್ನೆಗಳಿಗೆ ಉತ್ತರದ ವಿವರ ಪಡೆಯಲಾಗುತ್ತದೆ. ಆಯೊಗವು ಎಲ್ಲಾ ಮಾಹಿತಿಯನ್ನು ಸಂಗ್ರಹಿಸಿ. ವಿಶ್ಲೇಷಿಸಿ ಅಂತಿಮವಾಗಿ ಸರ್ಕಾರಕ್ಕೆ ವರದಿ ಕೊಡಲಿದೆ.

### ಮನೆಗಳಿಗೆ ಅಂಟಿಸಿರುವ ಸ್ಟಿಕ್ಕರ್ ತೆಗೆಯಬೇಡಿ

ಜಾತಿ ಗಣತಿಯ ಮೊದಲ ಭಾಗವಾಗಿ ವಿದ್ಯುತ್ ಪ್ರಸರಣ ಕಂಪನಿಗಳಾದ ಹೆಸ್ಕಾಂ, ಜೆಸ್ಕಾಂ, ಬೆಸ್ಕಾಂ, ಮೆಸ್ಕಾಂ, ಸೆಸ್ಕಾಂ ಸಿಬ್ಬಂದಿ ಪ್ರತಿ ಮನೆ ಬಾಗಿಲಿಗೆ ಸ್ಟಿಕ್ಕರ್ ಅಂಟಿಸುತ್ತಿದ್ದಾರೆ. ಯುಹೆಚ್ಐಡಿ ಎಂದರೆ ಯೂನಿಕ್ ಹೌಸ್ ಹೋಲ್ಡ್ ಐಡೆಂಟಿಫಿಕೇಶನ್ (ಅದ್ವಿತೀಯ ಗೃಹ ಖಾತೆ ಸಂಖ್ಯೆ). ರಾಜ್ಯದ ಪ್ರತಿ ಮನೆಗೂ ಒಂದು ಗುರುತಿಸುವಿಕೆಯ ಸಂಖ್ಯೆಯನ್ನು ನೀಡಲಾಗುತ್ತಿದೆ. ಈ ಸಂಖ್ಯೆಯನ್ನು ಹೊಂದಿರುವ ಸ್ಟಿಕ್ಕರ್ ಅಂಟಿಸಲಾಗುತ್ತಿದೆ.

ವಿದ್ಯುತ್ ಸಿಬ್ಬಂದಿ ಅಂಟಿಸುವ ಸ್ಟಿಕ್ಕರ್‌ಗಳನ್ನು ಯಾವುದೇ ಕಾರಣಕ್ಕೂ ಜನರು ತೆಗೆದು ಹಾಕುವುದು, ಮುಚ್ಚುವುದು ಅಥವಾ ನಾಶ ಪಡಿಸುವ ಕೆಲಸಗಳನ್ನು ಮಾಡಬಾರದು. ಒಂದು ವೇಳೆ ಮಾಡಿದ್ದಲ್ಲಿ ಸಮೀಕ್ಷೆ ಕಾರ್ಯಕ್ಕೆ ಅಡಚಣೆ ಉಂಟಾಗಲಿದ್ದು, ಸಮೀಕ್ಷೆ ಕಾರ್ಯದ ಸಂಗ್ರಹಕ್ಕೂ ಅಡಚಣೆ ಆಗಲಿದೆ.

### ಸಮೀಕ್ಷೆಯ ಮಹತ್ವ

ಹಿಂದುಳಿದ ವರ್ಗಗಳ ಆಯೋಗವು ಈ ಡೇಟಾವನ್ನು ಬಳಸಿ, ರಾಜ್ಯದಲ್ಲಿ ಹಿಂದುಳಿದ ಸಮುದಾಯಗಳ ಸಮಸ್ಯೆಗಳನ್ನು ಗುರುತಿಸಿ, ಅವರಿಗೆ ಸರಿ ಯಾದ ಮೀಸಲಾತಿ, ಶಿಕ್ಷಣ ಸೌಲಭ್ಯ ಗಳು, ಉದ್ಯೋಗ ಅವಕಾಶಗಳು ಮತ್ತು ಇತರ ಅಭಿವೃದ್ಧಿ ಯೋಜನೆ ಗಳನ್ನು ರೂಪಿಸುತ್ತದೆ. ಉದಾಹರಣೆಗೆ, ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಹೆಚ್ಚಿನ ಶಾಲೆಗಳು ಅಥವಾ ಸ್ಕಾಲರ್ ಶಿಪ್‌ಗಳನ್ನು ಒದಗಿಸ ಬಹುದು. ಸಾಮಾಜಿಕವಾಗಿ, ಜಾತಿ ಆಧಾರಿತ ಅಸಮಾನತೆಗಳನ್ನು ಕಡಿಮೆ ಮಾಡುವ ಕ್ರಮಗಳನ್ನು ತೆಗೆದುಕೊಳ್ಳಬಹುದು.

## ಜಿಲ್ಲೆಯ 17,856 ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಗುರಿ

» ಮೊದಲನೇ ಪುಟದಿಂದ

ಜಿಲ್ಲಾ ವಯಸ್ಕರ ಶಿಕ್ಷಣ ಅವಿರತ ಶ್ರಮ ವಹಿಸಿದೆ. ಈ ವರ್ಷ 898 ಸ್ವಯಂ ಸೇವಕ ಬೋಧಕರ ನಿಯೋಜನೆ ಮಾಡಿಕೊಳ್ಳಲಾಗಿದೆ. ಗ್ರಾಮದ ಸುಶಿಕ್ಷಿತ ಯುವಕ, ಯುವತಿ ಯರು ಅಥವಾ ಶಾಲಾ ಶಿಕ್ಷಕರು ಸ್ವಯಂ ಸೇವಕ ಬೋಧಕರಾಗಬಹುದು. ವರ್ಷದಲ್ಲಿ 120 ಗಂಟೆಗಳನ್ನು ಅವರು ಅನಕ್ಷರಸ್ಥರಿಗೆ ಪಾಠ ಹೇಳಿ ಕೊಡಬೇಕು. ಅವರಿಗೆ ಮಾಸಿಕ 2,500 ರೂ. ಗೌರವಧನ ಪಾವತಿಸಲಾಗು ತ್ತದೆ. ಕಲಿಕೆಗೆ ಅನುಕೂಲವಾಗಲಿ ಎಂಬ ಉದ್ದೇಶ ದಿಂದ ಸವಿ ಬರಹ ಹಾಗು ಬಾಳಿಗೆ ಬೆಳಕು ಎಂಬ ಎರಡು ಸಚಿತ್ರ ಲೇಖನಗಳ ಪುಸ್ತಕ ನೀಡಲಾಗುತ್ತದೆ. ಜೊತೆಗೆ ಪೆನ್ನು, ನೋಟ್‌ಪುಸ್ತಕಗಳನ್ನು ಇಲಾಖೆಯಿಂದ ಕೊಡಲಾಗಿದೆ.

**ಡಿಜಿಟಲ್ ಸಾಕ್ಷರತೆಗೆ ಉತ್ತೇಜನ**

ಗ್ರಾಮೀಣ ಭಾಗದ ಬಹುತೇಕ ವಯಸ್ಕರು ಓದು ಬರಹ ಬಾರದಿದ್ದರೂ ಆಂಡ್ರಾಯ್ಡ್ ಮೊಬೈಲ್ ಬಳಕೆ, ಆರ್ಥಿಕ ವ್ಯವಹಾರ, ಸಾಮಾಜಿಕ ಜಾಲತಾಣಗಳ ಬಳಕೆಯನ್ನು ರೂಢಿಯಿಂದ ಕಲಿತಿರುತ್ತಾರೆ. ಆ ಮೂಲಕ ಅವರಿಗೆ ಅಕ್ಷರ ಕಲಿಸಲು ಯೋಜನೆ ಹಾಕಿ ಕೊಳ್ಳಲಾಗಿದೆ. ಜೊತೆಗೆ ಆಧುನಿಕ ತಂತ್ರಜ್ಞಾನ ದಿಂದ ಆಗುತ್ತಿರುವ ದುಷ್ಪರಿಣಾಮಗಳನ್ನು ಹೇಳಿಕೊಡಲಾಗುತ್ತಿದೆ. ಸೈಬರ್ ಕ್ರೈಮ್, ಡಿಜಿಟಲ್ ಅರೆಸ್ಟ್ ನಂತಹ ಅಪಾಯಕಾರಿ ಸನ್ನಿ ವೇಶಗಳಿಂದ ದೂರವಿರುವಂತೆ ಸಂಪನ್ಮೂಲ ವ್ಯಕ್ತಿಗಳಿಂದ ಅರಿವು ಮೂಡಿಸಲಾಗುತ್ತಿದೆ. ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಅಧಿಕಾರಿ ಗಳು ದಿಢೀರ್ ಭೇಟಿ ಮೂಲಕ ಗ್ರಾಮೀಣ ಭಾಗದಲ್ಲಿ ವಯಸ್ಕರ ಕಲಿಕೆಯ ಪ್ರಗತಿ ಪರಿಶೀಲನೆ ಮಾಡುತ್ತಿದ್ದಾರೆ.

## ಹೆಚ್ಚುವರಿ ಶಿಕ್ಷಕರ ವರ್ಗಾವಣೆ ಖಂಡಿಸಿ ಪ್ರತಿಭಟನೆ

» ಮೊದಲನೇ ಪುಟದಿಂದ

ಏಳನೇ ತರಗತಿ ಮಕ್ಕಳಿಗೆ ಪಾಠ ಮಾಡುವ ಸಾಮರ್ಥ್ಯ ಇದೆಯೆಂದು ಪ್ರತಿಪಾದಿಸಿದರು.

ನಿವೃತ್ತಿ ಅಂಚಿನಲ್ಲಿರುವ ಶಿಕ್ಷಕರನ್ನು ಏಕಾಏಕಿ ಬೇರೆ ತಾಲ್ಲೂಕಿಗೆ ಕಳುಹಿಸಿಕೊಟ್ಟರೆ ಮನಸ್ಸಿಗೆ ನೋವಾಗುತ್ತದೆ. ಪ್ರಯಾಣವು ಕಷ್ಟದ ಕೆಲಸವಾಗಿದೆ. ಇಷ್ಟು ವರ್ಷಗಳಿಂದ ಒಂದೇ ಶಾಲೆ ಯಲ್ಲಿದ್ದು ಕೊನೆಯ ಘಟ್ಟದಲ್ಲಿ ಬೇರೆ ಕಡೆ ಕಳುಹಿಸುವುದೆಂದರೆ ಒಂದು ರೀತಿ ಶಿಕ್ಷೆ ವಿಧಿಸಿದಂತಾ ಗುತ್ತದೆ. ಆದ್ದರಿಂದ ಸರ್ಕಾರ ಶೇ.20 ರಷ್ಟು ಹುದ್ದೆಗಳಿಗೂ ನಮ್ಮನ್ನೇ ಪರಿಗಣಿಸಬೇಕೆಂದು ಒತ್ತಾಯಿಸಿದರು. ಜಿಪಿಎಸ್‌ಟಿಆರ್ ಶಿಕ್ಷಕರಿಗೆ ನೀಡುವ ಪ್ರಾಮುಖ್ಯತೆಯನ್ನು ನಮಗೂ ನೀಡಬೇಕು. ಸರ್ಕಾರದ ಈ ನಿರ್ಲಕ್ಷ್ಯ ಧೋರಣೆಯಿಂದ ನೂರಾರು ಶಿಕ್ಷಕರು ತೊಂದರೆ ಅನು ಭವಿಸುವಂತಾಗಿದೆ. ಈ ಕೆಲಸವೇ ಬೇಡವೆಂಬ ನಿರ್ಧಾರಕ್ಕೆ ಬಂದಿದ್ದೇವೆಂದು ಅವಲತ್ತು ಕೊಂಡರು. ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ರಂಗನಾಥ್ ಅವರಿಗೆ ಮನವಿ ಸಲ್ಲಿಸಿದರು.

# ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿದ ಸರ್ವೆಯರ್: ಆರೋಪ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಭೂಮಾಪನ ಕಚೇರಿ ನೌಕರರು ಹಣದ ಆಮಿಷಕ್ಕೆ ಬಲಿಯಾಗಿ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ನಮಗೆ ಮೋಸ ಮಾಡಿದ್ದಾರೆಂದು ಗೊದ್ದು ಗ್ರಾಮದ ಹೆಚ್.ಎನ್.ಬೋಜೇಗೌಡ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಸರ್ವೆ ನಂ.93/2ರಲ್ಲಿ ನನ್ನ ಪತ್ನಿ ಜ್ಯೋತಿ ಹೆಸರಿನಲ್ಲಿ 4 ಎಕರೆ 38 ಗುಂಟೆ ಕಾಫಿ ತೋಟವಿದೆ. ಇದು ಪೋಡಿ ಆದಾಗ ನಾಲ್ಕು ಭಾಗ ಮಾಡ ಲಾಯಿತು. ಆದರೆ ಜ್ಯೋತಿ ಅವರ ಚಿಕ್ಕಪ್ಪ ಜಿ.ಆರ್.ಮಲ್ಲೇಶ್ ಎಂಬುವವರು ಒತ್ತುವರಿ ಮಾಡಿಕೊಂಡಿದ್ದ ಜಮೀನನ್ನು ಬಿಡಲು ಒಪ್ಪದಿದ್ದಾಗ ನಾನು ಸಕಲೇಶಪುರ ಸಿವಿಲ್ ಹಿರಿಯ ನ್ಯಾಯಾಲಯದ ಮೆಟ್ಟಿಲೇರಿದ್ದೆ ಎಂದರು.

ನ್ಯಾಯಾಲಯದ ಸೂಚನೆ ಮೇರೆಗೆ ಸಕಲೇಶಪುರ ಭೂಮಾಪನ ಕಚೇರಿಯಿಂದ ಮನು ಎಂಬ ಸರ್ವೆಯರ್ ತೋಟಕ್ಕೆ ಬಂದು ಮೂಲ ಟಿಪ್ಪಣಿಯಂತೆ ಸರ್ವೆ ಮಾಡುವುದಾಗಿ ಹೇಳಿದರು. ಅದಾದ ಬಳಿಕ 2ನೇ ಬಾರಿಗೂ ಅವರೇ ಸರ್ವೆ ಮಾಡಲು ಬಂದಿದ್ದರು. ಈ ವೇಳೆ ಮಲ್ಲೇಶ್ ಹಾಗು ಅವರ ಮಗ ಸಂತೋಷ್ ಅವರ ಒತ್ತಾಯಕ್ಕೆ ಮಣಿದು ಸುಳ್ಳು ಹೇಳಿ ತೋಟದ ಮೂಲ ಸ್ಕೆಚ್ ಇಲ್ಲವೆಂದು, ಇದ್ದರೂ ತಾಂತ್ರಿಕ ದೋಷವಿದೆ ಎಂದು ತಪ್ಪು ವರದಿ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಮೂಲಕ ಕೋರ್ಟ್‌ಗೆ ಸುಳ್ಳು ಮಾಹಿತಿ ನೀಡಿದ್ದಾರೆ. ಅದನ್ನು ಆಧರಿಸಿ ಕೋರ್ಟ್ ನಮ್ಮ ಪ್ರಕರಣವನ್ನು ಕೈ ಬಿಟ್ಟಿದೆ ಎಂದರು.

ನೌಕರರ ಲಂಚದಾಹಕ್ಕೆ ನಮ್ಮ ಕುಟುಂಬಕ್ಕೆ ಮಾತ್ರವಲ್ಲ, ನ್ಯಾಯಾಲಯದ ಗೌರವಕ್ಕೂ ಧಕ್ಕೆಯಾಗಿದೆ. ಸುಮಾರು 15 ವರ್ಷಗಳ ಹಿಂದೆ ಮೂಲ ಟಿಪ್ಪಣಿಯಂತೆ ಸರ್ವೆ ನಡೆಸಿ ಅಣ್ಣ ತಮ್ಮಂದಿರ ಒಪ್ಪಿಗೆಯೊಂದಿಗೆ ಕಾನೂನು ಬದ್ಧ ದಾಖಲೆಗಳೂ ಸಿದ್ಧವಾಗಿದ್ದವು. ಆದರೀಗ ಅದನ್ನೇ ನಿರ್ಲಕ್ಷ್ಯ ಮಾಡಿ ಸುಳ್ಳು ಸ್ಕೆಚ್ ತಯಾರಿಸಿ ನ್ಯಾಯಾಲಯಕ್ಕೂ ಸಲ್ಲಿಸುವ ಮೂಲಕ ನಮಗೆ ಮಾನಸಿಕ ಕಿರುಕುಳ ಹಾಗು ಆರ್ಥಿಕ ಹಾನಿ ಉಂಟಾಗಿದೆ. ಹತ್ತು ವರ್ಷಗಳಿಂದ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿದ್ದೇವೆ, ಹೀಗಾದರೆ ಬಡವರಿಗೆ ನ್ಯಾಯ ಸಿಗೋದು ಹೇಗೆ ಎಂದು ಪ್ರಶ್ನಿಸಿದರು.

ಸರ್ವೆಯರ್ ಮನು ಹಾಗು ಪುನೀತ್ ಇಬ್ಬರೂ ನಮ್ಮ ಪ್ರತಿವಾದಿಗಳ ಆಮಿಷಕ್ಕೆ ಮಣಿದು ಸತ್ಯ ಮರೆ ಮಾಚಿದರು. ಅದರಿಂದ ನಮ್ಮ ಹಕ್ಕು ಕಳೆದು ಹೋಗುವಂತಾಗಿದೆ. ತಪ್ಪು ಸ್ಕೆಚ್ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸುಳ್ಳು ವರದಿ ಸಲ್ಲಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಆಗಬೇಕು, ನಮಗೆ ನ್ಯಾಯ ಸಿಗಬೇಕು ಎಂದು ಮನವಿ ಮಾಡಿದರು.

ಪತ್ನಿ ಜ್ಯೋತಿ ಹಾಗು ಅವರ ದೊಡ್ಡಪ್ಪ ಸುಬ್ರಹ್ಮಣ್ಯ ಇದ್ದರು.




# ಹಾಸನಾಂಬ ಉತ್ಸವ: ಜಿಲ್ಲೆಯ ಜನಪ್ರತಿನಿಧಿಗಳೊಂದಿಗೆ ಸಚಿವರ ಸಭೆ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಜಾತ್ರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನಲೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಶುಕ್ರವಾರ ಬೆಂಗಳೂರಿನ ತಮ್ಮ ಕಚೇರಿಯಲ್ಲಿ ಜಿಲ್ಲೆಯ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು.

ಅ.9 ರಿಂದ 23ರ ವರೆಗೆ ಜಾತ್ರೆ ನೆರವೇರಲಿದೆ. ಜಿಲ್ಲಾಡಳಿತ ಈಗಾಗಲೇ ಹಾಸನಾಂಬ ಹಾಗು ಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ ಸಿದ್ಧತೆ ನಡೆಸಿದ್ದು ಉಸ್ತುವಾರಿ ಸಚಿವರು ಸಹ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಿದ್ದರು.

**ಗಣ್ಯರೊಟ್ಟಿಗೆ 10 ಜನರಿಗಷ್ಟೇ ಅವಕಾಶ**

ಹಾಸನಾಂಬ ದರ್ಶನಕ್ಕೆ ಬರುವ ಶಾಸಕರು, ಸಚಿವರು, ನ್ಯಾಯಾಧೀಶರು ಹಾಗು ಸಂಸದರ ಜೊತೆಗೆ 10 ಜನರಿಗೆ ಮಾತ್ರ ಅವಕಾಶ ಮಾಡಿಕೊಡಬೇಕೆಂದು ಸಚಿವ ಕೃಷ್ಣಬೈರೇಗೌಡ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಅದಕ್ಕೆ ಜಿಲ್ಲೆಯ ಶಾಸಕರು, ಸಂಸದರು ಒಪ್ಪಿಗೆ ಸೂಚಿಸಿದರು.



ಅತಿಥಿ ಗಣ್ಯರು ಮೊದಲೇ ಬಂದು ಪ್ರವಾಸಿ ಮಂದಿರದಲ್ಲಿ ತಮ್ಮ ಕಾರು ನಿಲ್ಲಿಸಿ ಜಿಲ್ಲಾಡಳಿತದಿಂದ ನಿಯೋಜನೆ ಮಾಡುವ ವಾಹನಗಳಲ್ಲಿ ದೇವಸ್ಥಾನಕ್ಕೆ ತೆರಳಬೇಕು. ಅವರ ಜೊತೆಗೆ ಬೇರೆ ವಾಹನಗಳು ಹೋಗದಂತೆ ನೋಡಿಕೊಳ್ಳಬೇಕು. ವಿನಾ ಕಾರಣ ಗೊಂದಲ ಉಂಟಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳ ಬೇಕೆಂದರು.

ಸಭೆಯಲ್ಲಿ ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಎ.ಮಂಜು, ಸಿ.ಎನ್.ಬಾಲಕೃಷ್ಣ, ಸಿಮೆಂಟ್ ಮಂಜು, ಹೆಚ್.ಕೆ.ಸುರೇಶ್, ಹೆಚ್.ಪಿ. ಸ್ವರೂಪ್, ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯರಾದ ಡಾ.ಸೂರಜ್ ರೇವಣ್ಣ, ಮಧು ಮಾದೇಗೌಡ, ವಿವೇಕಾನಂದ ಇದ್ದರು.

**ಅದ್ವಾನ ತಡೆಗೆ ಮುನ್ನೆಚ್ಚರಿಕೆ**

ವರ್ಷಕ್ಕೊಮ್ಮೆ ದರ್ಶನ ಭಾಗ್ಯ ಕರುಣಿಸುವ ಹಾಸನಾಂಬ ದೇವಸ್ಥಾನಕ್ಕೆ ರಾಜ್ಯ ಮಾತ್ರವಲ್ಲದೆ ಹೊರ ಜಿಲ್ಲೆಯಿಂದಲೂ ಭಕ್ತರು ಬರುತ್ತಾರೆ. ಸಾರ್ವಜನಿಕರು ಮಾತ್ರವಲ್ಲದೆ ಜನ ಪ್ರತಿನಿಧಿಗಳು, ಸಿನಿಮಾ ನಟ-ನಟಿಯರು, ನ್ಯಾಯಾಧೀಶರು ಆಗಮಿಸುವುದರಿಂದ ಅಚ್ಚುಕಟ್ಟು ವ್ಯವಸ್ಥೆಗೆ ಜಿಲ್ಲಾಡಳಿತ ಕ್ರಮ ವಹಿಸಬೇಕಿದೆ. ಕಳೆದ ವರ್ಷ ವಿಐಪಿ ಹಾಗು ವಿವಿಐಪಿ ಪಾಸ್‌ಗಳನ್ನು ಬೇಕಾಬಿಟ್ಟಿ ವಿತರಿಸಿದ್ದರಿಂದ ನೂಕುನುಗ್ಗಲು ಉಂಟಾಗಿ ಅದ್ವಾನವಾಗಿತ್ತು. ಅಂತಹ ಪರಿಸ್ಥಿತಿ ಮತ್ತೆ ಉದ್ಭವಿಸಬಾರದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಈ ಹಿನ್ನಲೆ ಯಲ್ಲಿ ಜಿಲ್ಲೆಯ ಜನಪ್ರತಿನಿಧಿಗಳ ಸಲಹೆ-ಸೂಚನೆ ಪಡೆದಿದ್ದಾರೆ.

**ವಸತಿ ಯೋಜನೆ ಅವ್ಯವಹಾರ ಪ್ರಸ್ತಾಪ :** ಬೆಂಗಳೂರಿನಲ್ಲಿ ನಡೆದ ಸಭೆ ಕುರಿತು ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಹಾಸನಾಂಬ ಜಾತ್ರಾ ಮಹೋತ್ಸವ ಯಶಸ್ಸಿಗಾಗಿ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಚರ್ಚಿ ಸಲು ಜಿಲ್ಲಾ ಉಸ್ತುವಾರಿ ಸಚಿವರು ಆಹ್ವಾನಿಸಿದ್ದರೆಂದರು.

ಇದೇ ಸಂದರ್ಭದಲ್ಲಿ ವಸತಿ ಯೋಜನೆಯಲ್ಲಿ ಆಗಿರುವ ಅವ್ಯವಹಾರ ಕುರಿತು ಪ್ರಸ್ತಾಪಿಸಲಾಯಿತು. ಕೇವಲ ನೋಡಲ್ ಅಧಿಕಾರಿಯಿಂದ ಕೋಟ್ಯಾಂತರ ರೂಪಾಯಿ ಅವ್ಯವಹಾರವಾಗಲು ಸಾಧ್ಯವಿಲ್ಲ. ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಹಾಗು ಮುಖ್ಯ ಲೆಕ್ಕಾಧಿಕಾರಿಗಳಿಗೂ ವಿಚಾರ ಗೊತ್ತಿರುತ್ತದೆ. ಪ್ರಕರಣದ ಸಮಗ್ರ ತನಿಖೆ ನಡೆದರಷ್ಟೇ ಸತ್ಯ ಗೊತ್ತಾಗುತ್ತದೆ. ಪ್ರಕರಣದ ತನಿಖೆ ನಡೆಸುವುದಾಗಿ ಸಚಿವರು ಭರವಸೆ ನೀಡಿದ್ದಾರೆಂದರು.

# ಹುಡಾ ಅಧ್ಯಕ್ಷ ಸ್ಥಾನ ಸಿಗುವ ವಿಶ್ವಾಸ: ಗೋಪಾಲೇಗೌಡ




• ಪ್ರಜೋದಯ ವರದಿ

**ಹಾಸನ:** ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದ ನನ್ನನ್ನು ಗುರುತಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಉಪಾಧ್ಯಕ್ಷನನ್ನಾಗಿ ನೇಮಕ ಮಾಡಿದ್ದು, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನವನ್ನು ನೀಡುವ ವಿಶ್ವಾಸವಿದೆ ಎಂದು ಮರ್ಕುಲಿ ಗೋಪಾಲೇಗೌಡ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಎಐಸಿಸಿ ಸದಸ್ಯ ಬಿ. ಶಿವರಾಮ್ ಅವರ ಶಿಫಾರಸ್ಸಿನ ಮೇರೆಗೆ ತಮ್ಮನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕಾರ್ಮಿಕ ವಿಭಾಗದ ಉಪಾಧ್ಯಕ್ಷನಾಗಿ ನೇಮಿಸಲಾಗಿದೆ ಎಂದರು.

ನನ್ನ ಮೇಲೆ ವಿಶ್ವಾಸವಿಟ್ಟು ನೀಡಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ, ನಿಷ್ಠೆಯಿಂದ ನಿಭಾಯಿಸುವೆ. ರಾಜ್ಯ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನದಲ್ಲಿ ಸ್ಥಳೀಯ ನಾಯಕರ ಸಹಕಾರದೊಂದಿಗೆ ಪಕ್ಷ ಸಂಘಟನೆ ಮಾಡುವುದಾಗಿ ತಿಳಿಸಿದರು.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಆಕಾಂಕ್ಷಿಗಳಲ್ಲಿ ನಾನೂ ಒಬ್ಬನಾಗಿದ್ದೇನೆ. ನನಗೆ ಜವಾಬ್ದಾರಿ ನೀಡಿದರೆ ನಿಭಾಯಿಸುವೆ ಎಂದು ಪ್ರಶ್ನೆಗೆ ಉತ್ತರಿಸಿದರು.

ಕಾಂಗ್ರೆಸ್ ಮುಖಂಡರಾದ ಶಿವಣ್ಣ ಅರಸೀಕೆರೆ, ದೇವರಾಜೇಗೌಡ, ಗಿರೀಶ್, ಸತೀಶ್ ಇದ್ದರು.

## ಚಿನ್ನಾಭರಣ ಕಳವು

**ಸಕಲೇಶಪುರ:** ಮನೆ ಬಾಗಿಲು ಮುರಿದು ಒಳಪ್ರವೇಶಿಸಿ ರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 2.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಪಟ್ಟಣದ ಬಾಳೆಗದ್ದೆಯಲ್ಲಿ ನಡೆದಿದೆ.

ಬಸವರಾಜು ಎಂಬುವವರ ಮನೆಯಲ್ಲಿ ಕಳ್ಳತನವಾ ಗಿದೆ. ತಂದೆಯ ಅನಾರೋಗ್ಯ ಹಿನ್ನಲೆಯಲ್ಲಿ ಸೆ.11 ರಂದು ಹಾಸನದ ಆಸ್ಪತ್ರೆಗೆ ಕರೆದುಕೊಂಡು ಬಂದಿ ದ್ದರು. ವಾಪಾಸ್ ಮನೆಗೆ ಹೋದಾಗ ಗೇಟ್‌ನಿಂದ ಯುವಕನನೊಬ್ಬ ಓಡಿ ಹೋಗಿದ್ದು ಕಂಡಿದೆ. ಬೀರುವಿನಲ್ಲಿಟ್ಟಿದ್ದ 14 ಗ್ರಾಂ ತೂಕದ ಒಂದು ಚಿನ್ನದ ಚೈನ್, 8 ಗ್ರಾಂ ತೂಕದ ಚಿನ್ನದ ಉಂಗುರ, 8 ಗ್ರಾಂ ತೂಕದ ಚಿನ್ನದ ಒಂದು ಜೊತೆ ಓಲೆ ಕಳವು ಮಾಡಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 25 ಕೆ.ಜಿ. ಗಾಂಜಾ ಸಮೇತ ಮೂವರ ಬಂಧನ

**ಹಾಸನ:** ಅಕ್ರಮ ಗಾಂಜಾ ಮಾರಾಟ ಜಾಲವನ್ನು ಬೇಧಿಸಿರುವ ಶಾಂತಿಗ್ರಾಮ ಪೊಲೀಸರು ಮೂವರನ್ನು ಬಂಧಿಸಿ 25 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ.

ಸೈಯದ್ ಫೈಸಲ್, ಸಿಕಂದರ್ ಪಾಷಾ ಹಾಗು ಹೀನಾ ಕೌಸರ್ ಬಂಧಿತರು. ಎಲ್ಲಿಂದಲೋ ಗಾಂಜಾ ಪದಾರ್ಥವನ್ನು ತಂದಿದ್ದ ಅವರು ಮಾರಾಟದ ಉದ್ದೇಶದಿಂದ ಬೆಂಗಳೂರಿಗೆ ತೆರಳುತ್ತಿದ್ದರು. ಸಾರಿಗೆ ಬಸ್ ಹಾಗು ಖಾಸಗಿ ವಾಹನಗಳಲ್ಲಿ ಸಂಚರಿಸಿದರೆ ಅನುಮಾನ ಬರುತ್ತದೆಂದು ರೈಲು ಸಂಚಾರ ಸುಲಭವೆಂದು ಯೋಜನೆ ರೂಪಿಸಿದ್ದರು. ಶಾಂತಿಗ್ರಾಮ ವೃತ್ತ ನಿರೀಕ್ಷಕ ಕೆ.ಎನ್. ಚಂದ್ರಶೇಖರ್ ಅವರು ಖಚಿತ ಮಾಹಿತಿ ಮೇರೆಗೆ ಶುಕ್ರವಾರ ರೈಲು ನಿಲ್ದಾಣಕ್ಕೆ ಭೇಟಿ ನೀಡಿದಾಗ ಸಿಕ್ಕಿಬಿದ್ದಿದ್ದಾರೆ. ಮೂವರು ಆರೋಪಿಗಳ ಮೂಲ ಯಾವುದು ಹಾಗು ಗಾಂಜಾ ಎಲ್ಲಿಂದ ತಂದರು ಎಂಬ ಕುರಿತು ವಿಚಾರಣೆ ಮುಂದುವರಿದಿದೆ.

# ಕಳಪೆ ಬಿತ್ತನೆ ಬೀಜ ವಿತರಣೆ: ರೈತರ ಆಕ್ರೋಶ



• ಪ್ರಜೋದಯ ವರದಿ

**ಅರಕಲಗೂಡು:** ಕೃಷಿ ಇಲಾಖೆಯಿಂದ ವಿತರಿಸಲಾದ ಬಿತ್ತನೆ ಭತ್ತ ಸಂಪೂರ್ಣ ಕಳಪೆಯಾಗಿದ್ದು ಪೈರು ಬೆಂಕಿ ರೋಗಕ್ಕೆ ತುತ್ತಾಗಿ ಹಾನಿಗೀಡಾಗಿದೆ.

ತಾಲ್ಲೂಕಿನ ರಾಮನಾಥಪುರ ಹೋಬಳಿ ರುದ್ರಪಟ್ಟಣ ಗ್ರಾಮ ಸೇರಿ ಸುತ್ತಲಿನ ಹಳ್ಳಿಗಳಲ್ಲಿ ಸಮಸ್ಯೆ ಕಾಣಿಸಿಕೊಂಡಿದೆ. ಅಧಿಕಾರಿಗಳು ಮಾಡಿದ ತಪ್ಪಿಗೆ ರೈತರು ಸಂಕಷ್ಟ ಎದುರಿಸುವಂತಾಗಿದೆ. ಗ್ರಾಮದ ನಿತಿನ್ ಅವರು ತಮ್ಮ ಜಮೀನಿನಲ್ಲಿ ಭತ್ತದ ಬೆಳೆ ಕೈಗೊಂಡಿದ್ದರು. ಈ ವರ್ಷ ಉತ್ತಮ ಮಳೆಯಾಗಿದ್ದು ಅಧಿಕ ಇಳುವರಿ ಬರುವ ನಿರೀಕ್ಷೆಯಲ್ಲಿದ್ದರು. ಏಕಾಏಕಿ ಪೈರು ಕಂದು ಬಣ್ಣಕ್ಕೆ ತಿರುಗಿದೆ. ರೋಗ ಹತೋಟಿಗೆ ತರಲು ಎಷ್ಟೇ ಕ್ರಿಮಿನಾಶಕ ಸಿಂಪಡಿಸಿದರೂ ಪ್ರಯೋಜನವಾಗಿಲ್ಲ. ದಿಢೀರನೆ ಪೈರಿಗೆ ಬೆಂಕಿ ರೋಗ ಹರಡಲು ಕಳಪೆ ಬಿತ್ತನೆ ಭತ್ತ ಕಾರಣವೆಂದು ರೈತರು ಆರೋಪಿಸಿದ್ದಾರೆ.

ಈ ಕುರಿತು ಕೃಷಿ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿದರೂ ಸಕಾರಾತ್ಮಕ ಪ್ರತಿಕ್ರಿಯೆ ಬಂದಿಲ್ಲ. ಸಾಲ ಸೋಲ ಮಾಡಿ ಮಾಡಿ ಬೆಳೆ ಕೈಗೊಂಡಿದ್ದ ರೈತರು ಈಗ ಕಣ್ಣೀರಿನಲ್ಲಿ ಕೈ ತೊಳೆಯುವಂತಾಗಿದೆ.

ರೈತ ನಿತಿನ್ ಅವರು ಮಾತನಾಡಿ, ರಾಷ್ಟ್ರೀಯ ಬೀಜ ನಿಗಮ ವಿತರಿಸಿದ ಬೀಜ ಸಂಪೂರ್ಣ ಕಳಪೆಯಾಗಿದೆ. ಕೃಷಿ ಇಲಾಖೆ ಅಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸದೆ ಉಡಾಫೆ ಉತ್ತರ ನೀಡುತ್ತಿದ್ದಾರೆ. ಈ ವರ್ಷ ಅಧಿಕ ಆದಾಯದ ನಿರೀಕ್ಷೆಯಲ್ಲಿದ್ದ ರೈತರಿಗೆ ತೊಂದರೆಯಾಗಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ನಷ್ಟಕ್ಕೀಡಾಗಿರುವ ಬೆಳೆಗೆ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು.

# ಸೆ.15ಕ್ಕೆ ಒಕ್ಕಲಿಗ ಧರ್ಮ ಮಹಾಸಭಾ ಉದ್ಘಾಟನೆ

• ಪ್ರಜೋದಯ ವರದಿ

**ಹಾಸನ:** ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಒಕ್ಕಲಿಗ ಧರ್ಮ ಮಹಾಸಭಾ ಜಿಲ್ಲಾ ಘಟಕ ಉದ್ಘಾಟನೆ ಹಾಗು ಜನಗಣತಿ ಒಕ್ಕಲಿಗರ ಜಾಗೃತ ಸಭೆಯನ್ನು ಸೆ.15ರ ಸೋಮ ವಾರ ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕಲಿಗ ಧರ್ಮ ಮಹಾಸಭಾದ ಜಿಲ್ಲಾಧ್ಯಕ್ಷೆ ಭಾರತಿ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಕುಣಿಗಲ್ ತಾಲ್ಲೂಕು ಕಿತ್ತಮಂಗಲ ಅರೆಶಂಕರ ಮಠದ ಮಠಾಧೀಶ ಶ್ರೀ ಸಿದ್ದರಾಮಯ್ಯ ಚೈತನ್ಯ ಸ್ವಾಮೀಜಿ ಉದ್ಘಾಟನೆ ನೆರವೇರಿಸಲಿದ್ದಾರೆ.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್, ಮಾಜಿ ಶಾಸಕ ಪ್ರೀತಮ್ ಜೆ. ಗೌಡ, ಮಹಾನಗರ ಪಾಲಿಕೆ ಪ್ರಭಾರ ಮೇಯರ್ ಹೇಮಲತಾ, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ತಹಶೀಲ್ದಾರ್ ಗೀತಾ, ಪಾಲಿಕೆ ಮೇಯರ್ ಆರ್. ಕೃಷ್ಣಮೂರ್ತಿ, ಕಾಂಗ್ರೆಸ್ ಮುಖಂಡ ದೇವರಾಜೇಗೌಡ ಸೇರಿ ಮತ್ತಿತರರು ಭಾಗವಹಿಸಲಿದ್ದಾರೆಂದರು.

ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಹಾಸಭಾ ಮುಖಂಡ ರಾದ ದೇವರಾಜ್, ರಂಗಸ್ವಾಮಿ, ಶ್ರೀನಿವಾಸ್, ನಾಗಲಕ್ಷ್ಮಿ ಇತರರಿದ್ದರು.




# ವಿಷ್ಣುವರ್ಧನ್‌ಗೆ ಕರ್ನಾಟಕ ರತ್ನ: ಅಭಿಮಾನಿಗಳ ಸಂಭ್ರಮ

• ಪ್ರಜೋದಯ ವರದಿ

**ಹಾಸನ:** ಕನ್ನಡ ಚಿತ್ರರಂಗದ ಮೇರು ನಟ ಡಾ. ವಿಷ್ಣುವರ್ಧನ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆಯಾದ ಹಿನ್ನಲೆಯಲ್ಲಿ ಶುಕ್ರವಾರ ವಿಷ್ಣು ಸೇನಾ ಸಂಘಟನೆಯಿಂದ ಸಂಭ್ರಮಾಚರಿಸಲಾಯಿತು.

ಸಾಲಗಾಮೆ ರಸ್ತೆಯ ಸರಸ್ವತಿ ದೇವಾಲಯ ವೃತ್ತದ ಬಳಿಯ ವಿಷ್ಣುವರ್ಧನ್ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ ಸಿಹಿ ಹಂಚಿ ಸಂತೋಷ ವ್ಯಕ್ತಪಡಿಸಿದರು.

ವಿಷ್ಣು ಸೇನಾ ಜಿಲ್ಲಾಧ್ಯಕ್ಷ ಮಹಂತೇಶ್ ಅವರು ಮಾತನಾಡಿ, ನಟ ವಿಷ್ಣುವರ್ಧನ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿರುವುದು ಹಬ್ಬದ ಕ್ಷಣವಾಗಿದೆ. 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ ಸಾಹಸ ಸಿಂಹ ಪ್ರತಿ ಯೊಂದು ಚಿತ್ರವೂ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಿದೆ. ಸಮಾಧಿಗಾಗಿ ಬೆಂಗಳೂರಿನಲ್ಲಿ 10 ಗುಂಟೆ ಜಾಗ ನೀಡುವುದಾಗಿ ಸರ್ಕಾರ ಹೇಳಿರುವುದು ಆಶಾದಾಯಕ ಬೆಳವಣಿಗೆ ಎಂದರು.

ಕಲಾವಿದರ ಸಂಘದ ಅಧ್ಯಕ್ಷ ಕುಮಾರ್ ಅವರು ಮಾತನಾಡಿ, ವಿಷ್ಣುವರ್ಧನ್ ಎಂದರೆ ಸಂಸ್ಕಾರದ ವ್ಯಕ್ತಿತ್ವ. ನಟನಾಗಿ ಸಮಾಜಕ್ಕೆ ಒಳ್ಳೆಯ ಸಂದೇಶ ರವಾನಿಸಿದ್ದಾರೆ. ಪರದೆ ಮೇಲೆ ಹೇಗೆ ಯಜಮಾನನಾಗಿ, ಕರುಣಾ ಮಯಿಯಾಗಿ, ಕರ್ಣನಾಗಿ ನಟಿಸಿದ್ದಾರೋ ನಿಜ ಜೀವನದಲ್ಲಿಯೂ ಅದೇ ರೀತಿಯ ಸಜ್ಜನಿಕೆಯ ಬದುಕು ನಡೆಸಿದ್ದಾರೆಂದರು.

ವಿಷ್ಣು ಸೇನೆಯ ಯಲಗುಂದ ಶಾಂತಕುಮಾರ್, ರಘುನಂದನ್, ತಮ್ಲಾಪುರ ಗಣೇಶ್, ಸುಧಾಕರ್, ವಿಜಯಕುಮಾರ್ ಮತ್ತಿತರರಿದ್ದರು.




# ಚಿಲ್ಲರೆ ಹಣದುಬ್ಬರ ಏರಿಕೆ : 2ನೇ ಸ್ಥಾನದಲ್ಲಿ ಕರ್ನಾಟಕ

• ಪ್ರಜೋದಯ ವರದಿ

**ನವದೆಹಲಿ:** ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ದೇಶದ ಚಿಲ್ಲರೆ ಹಣದುಬ್ಬರವು ಆಗಸ್ಟ್ ತಿಂಗಳಿನಲ್ಲಿ ಶೇ.2.07ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಶುಕ್ರವಾರ ತಿಳಿಸಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇ.1.61ರಷ್ಟಿತ್ತು. 2024ರ ಆಗಸ್ಟ್‌ನಲ್ಲಿ ಶೇ.3.65ರಷ್ಟಿತ್ತು. 9 ತಿಂಗಳಿನಿಂದ ಇಳಿಕೆ ಕಂಡಿದ್ದ ಹಣದುಬ್ಬರವು ಈಗ ಏರಿಕೆಯಾಗಿದೆ. ನವೆಂಬರ್‌ನಲ್ಲಿ ಶೇ.5.48 ದಾಖಲಾಗಿತ್ತು.



ತರಕಾರಿಗಳು, ಮಾಂಸ, ಮೀನು, ಮೊಟ್ಟೆ, ಎಣ್ಣೆ ಮತ್ತು ವೈಯಕ್ತಿಕ ಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಹಣದುಬ್ಬರ ಏರಿಕೆಯಾಗಿದೆ ಎಂದು ತಿಳಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ.4ರ ಹಂತದಲ್ಲಿ ಇರ ಬೇಕು, ಅದು ಶೇ.2ಕ್ಕಿಂತ ಕಡಿಮೆ ಆಗಬಾರದು ಎಂಬುದು ಆರ್‌ಬಿಐಗೆ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಗುರಿ. ದೇಶದ ಗ್ರಾಮೀಣ ಪ್ರದೇಶದಲ್ಲಿ ಹಣ ದುಬ್ಬರವು ಜುಲೈನಲ್ಲಿ ಶೇ.1.18 ರಷ್ಟಿತ್ತು. ಆಗಸ್ಟ್‌ನಲ್ಲಿ ಶೇ.1.69ಕ್ಕೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ನಗರ ಪ್ರದೇಶದಲ್ಲಿ ಶೇ.2.1ರಿಂದ ಶೇ.2.47ಕ್ಕೆ ಹೆಚ್ಚಳವಾಗಿದೆ. ಆಹಾರ ಮತ್ತು ಪಾನೀಯ ವಿಭಾಗದ ವಸ್ತುಗಳ ದರದಲ್ಲಿನ ಹೆಚ್ಚಳದಿಂದ ಹಣ ದುಬ್ಬರವು ಆಗಸ್ಟ್‌ನಲ್ಲಿ ಹೆಚ್ಚಾಗಿದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ. ಇತ್ತೀಚೆಗೆ ಸುರಿದ ಹೆಚ್ಚಿನ ಮಳೆ ಮತ್ತು ದೇಶದ ಕೆಲವು ಭಾಗದಲ್ಲಿ ಉಂಟಾದ ಪ್ರವಾಹವು ಬೆಳೆಯ ಇಳುವರಿ ಮೇಲೆ ಪರಿಣಾಮ ಬೀರ ಬಹುದು. ಅದರಿಂದ ದರವು ಹೆಚ್ಚಳವಾಗಬಹುದೆಂದು ತಿಳಿಸಿದ್ದಾರೆ.

### ರಾಜ್ಯಕ್ಕೆ 2ನೇ ಸ್ಥಾನ

**ಅತಿ ಹೆಚ್ಚು ಹಣದುಬ್ಬರ ಹೊಂದಿರುವ ರಾಜ್ಯಗಳ ಪೈಕಿ ಕರ್ನಾಟಕ 2ನೇ ಸ್ಥಾನದಲ್ಲಿದ್ದು ಶೇ.3.81 ಇದೆ. ಮೊದಲ ಸ್ಥಾನದಲ್ಲಿ ಕೇರಳ ಶೇ.9.04 ಹೊಂದಿದ್ದರೆ ಅಸ್ಸಾಂ ಅತಿ ಕಡಿಮೆ (–) ಶೇ.0.66 ಇದೆ.**

**ಚಿಲ್ಲರೆ ಹಣದುಬ್ಬರ**

2024 ಆಗಸ್ಟ್–3.65, ಸೆಪ್ಟೆಂಬರ್–5.49
ಅಕ್ಟೋಬರ್–6.21, ನವೆಂಬರ್–5.48
ಡಿಸೆಂಬರ್–5.22, 2025 ಜನವರಿ–4.26
ಫೆಬ್ರುವರಿ–3.61, ಮಾರ್ಚ್–3.34
ಏಪ್ರಿಲ್–3.16, ಮೇ–2.82
ಜೂನ್–2.1, ಜುಲೈ–1.61
ಆಗಸ್ಟ್–2.07

# ಕಾಡಾನೆ ಹಿಂಡು ದಾಳಿ: ಜೋಳ, ಕಾಫಿ ನಾಶ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಕೋಗಿಲ ಮನೆ ಗ್ರಾಮ ಪಂಚಾಯತಿ ವ್ಯಾಪ್ತಿ ಯ ಬೊಮ್ಮಡಿಹಳ್ಳಿ ಗ್ರಾಮ ಹಾಗೂ ನಾಗೇನಹಳ್ಳಿ ಹಿರೆಸಡೆ ಅಬ್ದುಲ್ ಅಜೀಜ್ ಎಸ್ಟೇಟ್‌ನ ಕಾಫಿತೋಟದಲ್ಲಿ ಫಸಲಿಗೆ ಬಂದಿದ್ದ ಕಾಫಿ ಗಿಡಗಳು ಹಾಗೂ ಜೋಳದ ಹೊಲಕ್ಕೆ ನುಗ್ಗಿರುವ ಕಾಡಾನೆಗಳು ದಾಳಿ ನಡೆಸಿ ಕಟಾವಿಗೆ ಬಂದಿದ್ದ ಬೆಳೆಗಳನ್ನು ಸಂಪೂರ್ಣವಾಗಿ ನಾಶ ಪಡಿಸಿರುವ ಘಟನೆ ನಡೆದಿದೆ.

ಅರೇಹಳ್ಳಿ ಹೋಬಳಿ ಮಲ್ಲಾಪುರ ಗ್ರಾಮದ ಹೇಮಂತ್ ಕುಮಾರ್ ಅವರು ಬೊಮ್ಮಡಿಹಳ್ಳಿ ಗ್ರಾಮದಲ್ಲಿ ಜೋಳ ಬೆಳೆದಿದ್ದು, ಶುಕ್ರವಾರ ಬೆಳಿಗ್ಗೆ ಎಂದಿನಂತೆ ಹೊಲಕ್ಕೆ ಹೋದ ಸಂದ ರ್ಭದಲ್ಲಿ ಬೆಳೆ ನಾಶವಾಗಿರುವುದು ಕಂಡು ಬಂದಿದೆ.

ನಾಗೇನಹಳ್ಳಿ ಹಿರೆಸಡೆ ಗ್ರಾಮ ದಲ್ಲೂ ಕಾಡಾನೆಗಳ ದಾಳಿಯಿಂದ ಸಾಕಷ್ಟು ಕಾಫಿಗಿಡಗಳು ಸಂಪೂರ್ಣ ವಾಗಿ ನೆಲಕಚ್ಚಿದೆ. ಬೀಟಮ್ಮ ಗುಂಪಿನ 12 ಆನೆಗಳು ಒಟ್ಟಾಗಿ ಕಾಣಿಸಿಕೊಂಡು ಕಾಫಿತೋಟವನ್ನು ಹಾಳುಮಾಡಿದ್ದು ಅದರಿಂದ ಸುಮಾರು 1.50 ಲಕ್ಷ ರೂ.ಗೂ ಹೆಚ್ಚು ನಷ್ಟವಾಗಿದೆ ಎಂದು ಅಬ್ದುಲ್ ಹಜೀಜ್ ಅಳಲು ತೋಡಿಕೊಂಡಿದ್ದಾರೆ.

ಬೊಮ್ಮಡಿಹಳ್ಳಿ ಗ್ರಾಮದಲ್ಲೂ ಆನೆಗಳ ಕಾಲ್ತುಳಿತಕ್ಕೆ ಸಿಲುಕಿ ಎರಡು ತಿಂಗಳಲ್ಲಿ ಫಸಲು ನೀಡಬೇಕಾದ ಕಾಫಿ ಗಿಡಗಳು ಮುರಿದು ಬಿದ್ದಿವೆ. ಸಾವಿರಾರು ರೂಪಾಯಿ ವೆಚ್ಚ ಮಾಡಿ ಬೆಳೆದಿದ್ದ ಫಸಲನ್ನು ಆನೆಗಳು ತಿಂದು ನಷ್ಟ ಉಂಟು ಮಾಡಿವೆ. ಬೆಳೆ ನಾಶದಿಂದ ಈ ಭಾಗದ ರೈತರು ಆತಂಕ ಗೊಂಡಿದ್ದು, ಜಮೀನಿಗೆ ಹೋಗಲು ಭಯ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕೂಡಲೇ ಅರಣ್ಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಕಾಡಾನೆ ಗಳನ್ನು ಸ್ಥಳಾಂತರಿಸಬೇಕು. ಬೆಳೆ ನಷ್ಟಕ್ಕೆ ಪರಿಹಾರ ನೀಡಬೇಕು ಎಂದು ರೈತ ಹೇಮಂತ್‌ಕುಮಾರ್ ಆಗ್ರಹಿಸಿದ್ದಾರೆ.



ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172–231188, ಮೊ: 9449203019